# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಸೆಪ್ಟೆಂಬರ್ 01, 2020

ಸಂಪುಟ : 47 ಸಂಚಿಕೆ : 112 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


## ಭಾರತ ರತ್ನ ಪ್ರಣಬ್ ಇನ್ನಿಲ್ಲ

### ಪಕ್ಷದ ಗಡಿ ಮೀರಿ ಬೆಳೆದ ಮುತ್ಸದ್ಧಿ ನಾಯಕ



**ಏಳು ದಿನಗಳ ಶೋಕಾಚರಣೆ**

ನವದೆಹಲಿ, ಆ. 31- ದೇಶದ ಅತ್ಯಂತ ಗೌರವಾನ್ವಿತ ಹಾಗೂ ಮೆಚ್ಚುಗೆ ಪಡೆದ ನಾಯಕರಲ್ಲೊಬ್ಬರಾದ ಭಾರತ ರತ್ನ ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ನಿಧನರಾಗಿದ್ದಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು.

ಪ್ರಣಬ್ ನಿಧನದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಏಳು ದಿನಗಳ ಸಂತಾಪ ಪ್ರಕಟಿಸಿದೆ.

ತಮ್ಮ ರಾಜಾಜಿ ಮಾರ್ಗ್ ನಿವಾಸದಲ್ಲಿ ಬಿದ್ದು ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಗಸ್ಟ್ 10ರಂದು ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿದ್ದನ್ನು ತೆಗೆಯಲು ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ನಂತರದಲ್ಲಿ ಶ್ವಾಸಕೋಶದ ಸೋಂಕು ಸಹ ಕಾಣಿಸಿಕೊಂಡಿದ್ದು ಅವರ ಆರೋಗ್ಯ ಸ್ಥಿತಿ ಬಿಗಡಾಯಿಸಲು ಕಾರಣವಾಯಿತು.

ಸಾವು - ಬದುಕಿನ ಹೋರಾಟ ನಡೆಸಿದ ಮುಖರ್ಜಿ, ಸೋಮವಾರ ಸಂಜೆ ಸೈನಿಕ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಐದು ದಶಕಗಳ ಸುದೀರ್ಘ ರಾಜಕೀಯ ಜೀವನ ನಡೆಸಿದ್ದ ಮುಖರ್ಜಿ, ಏಳು ಬಾರಿ ಸಂಸತ್ತಿಗೆ ಆಯ್ಕೆಯಾಗಿದ್ದರು. ಹಲವು ಪ್ರಧಾನಿಗಳ ಸಂಪುಟದಲ್ಲಿ ಕಾರ್ಯ ನಿರ್ವಹಿಸಿದ್ದ ಅವರು, 2012ರಲ್ಲಿ ರಾಷ್ಟ್ರಪತಿ ಸ್ಥಾನ (2ನೇ ಪುಟಕ್ಕೆ)

### ನಿರ್ಣಾಯಕ ಘಟ್ಟಗಳನ್ನು ನಿರ್ವಹಿಸಿದ ನೇತಾರ

ಕಾಂಗ್ರೆಸ್ ಪಕ್ಷದ ಉನ್ನತ ನಾಯಕರಾಗಿದ್ದ ಪ್ರಣಬ್ ಮುಖರ್ಜಿ, ಹಲವು ಪ್ರಮುಖ ಘಟ್ಟಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು. 2004ರಲ್ಲಿ ಅವರು ಹೆನ್ರಿ ಕೆಸಿಂಜರ್ ಜೊತೆ ನಡೆಸಿದ ಭೇಟಿ ಭಾರತ – (3ನೇ ಪುಟಕ್ಕೆ)

# ಜಿಡಿಪಿ 23.9% ಭಾರೀ ಕುಸಿತ

**ಕೃಷಿ ವಲಯ ಹೊರತು ಪಡಿಸಿ ಉತ್ಪಾದನೆ, ನಿರ್ಮಾಣ ಹಾಗೂ ಸೇವಾ ವಲಯಗಳು ತೀವ್ರ ಸ್ವರೂಪದ ಇಳಿಕೆ ಕಂಡಿವೆ**




ನವದೆಹಲಿ, ಆ. 31 – ಏಪ್ರಿಲ್‌ನಿಂದ ಜೂನ್ ನಡುವಿನ ಪ್ರಥಮ ಚತುರ್ಥದಲ್ಲಿ ಭಾರತದ ಜಿ.ಡಿ.ಪಿ. ಶೇ.23.9ರ ಭಾರೀ ಪ್ರಮಾಣದಲ್ಲಿ ಕುಸಿತ ಕಂಡಿದೆ. ಅದಾಗಲೇ ಮಂದವಾಗಿದ್ದ ಆರ್ಥಿಕ ವ್ಯವಸ್ಥೆಗೆ ಕೊರೊನಾ ಹೊಡೆತ ಬಿದ್ದಿರುವುದೇ ಇದಕ್ಕೆ ಕಾರಣವಾಗಿದೆ.

ಇದೇ ಚತುರ್ಥದಲ್ಲಿ ಕಳೆದ ವರ್ಷ ಜಿಡಿಪಿ ಬೆಳವಣಿಗೆ ದರ ಶೇ.5.2ರಷ್ಟಿತ್ತು ಎಂದು ರಾಷ್ಟ್ರೀಯ ಅಂಕಿ-ಅಂಶಗಳ ಕಚೇರಿ ತಿಳಿಸಿದೆ.

ಕೊರೊನಾ ಹಿನ್ನೆಲೆಯಲ್ಲಿ ಮಾರ್ಚ್ 25ರಂದು ಕೇಂದ್ರ ಸರ್ಕಾರ ರಾಷ್ಟ್ರವ್ಯಾಪಿ ಲಾಕ್‌ಡೌನ್ ಹೇರಿಕೆ ಮಾಡಿತ್ತು. ಇದರಿಂದಾಗಿ ಆರ್ಥಿಕತೆಯ ಎಲ್ಲಾ ವಲಯಗಳ ಮೇಲೆ ಪರಿಣಾಮವಾಗಿದೆ. ಅಂಕಿ-ಅಂಶಗಳ ಪ್ರಕಾರ ಉತ್ಪಾದನಾ ವಲಯದ ಒಟ್ಟು ಮೌಲ್ಯ ವರ್ಧನೆ (ಜಿ.ವಿ.ಎ.) ಶೇ.39.3ರಷ್ಟು ಕುಸಿತವಾಗಿದೆ.

ಆದರೆ, ಕೃಷಿ ವಲಯದ ಮೌಲ್ಯ ಶೇ.3.4ರಷ್ಟು ಹೆಚ್ಚಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಕೃಷಿ ವಲಯದ ಮೌಲ್ಯ ಶೇ.3ರಷ್ಟು ಬೆಳೆದಿತ್ತು.

ನಿರ್ಮಾಣ ವಲಯದ ಜಿವಿಎ ಶೇ.50.3ರ ಭಾರೀ ಪ್ರಮಾಣದ ಕುಸಿತ ಕಂಡಿದೆ. ಗಣಿ ವಲಯದಲ್ಲಿ ಶೇ.2.3ರಷ್ಟು ಇಳಿಕೆಯಾಗಿದೆ.

ವಿದ್ಯುತ್, ಅನಿಲ, ಜಲ ಪೂರೈಕೆ ಹಾಗೂ ಇತರೆ ಸೇವೆಗಳ ವಲಯ ಶೇ.7ರ ಇಳಿಕೆಯಾಗಿದೆ. ಕಳೆದ ವರ್ಷ ಈ ವಲಯ ಶೇ.8.8ರ ಬೆಳವಣಿಗೆ ಕಂಡಿತ್ತು.

ವ್ಯಾಪಾರ, ಹೋಟೆಲ್, ಸಾರಿಗೆ-ಸಂಪರ್ಕ ಹಾಗೂ ಸೇವಾ ವಲಯಗಳು ಪ್ರಥಮ ಚತುರ್ಥದಲ್ಲಿ ಶೇ.47ರ ಇಳಿಕೆ ಕಂಡಿದೆ. ಹಣಕಾಸು, ರಿಯಲ್ ಎಸ್ಟೇಟ್ ಹಾಗೂ ವೃತ್ತಿಪರ ಸೇವೆಗಳು ಶೇ.5.3ರ ಕುಸಿತ ಕಂಡಿವೆ.

ಸಾರ್ವಜನಿಕ ಆಡಳಿತ, ರಕ್ಷಣೆ ಹಾಗೂ ಇತರೆ ಸೇವೆಗಳ ವಲಯ ಶೇ.10.3ರ ಕುಸಿತ ಕಂಡಿದೆ. 2020-21ರ ಪ್ರಥಮ ಚತುರ್ಥದಲ್ಲಿ ಜಿಡಿಪಿ ಕುಸಿತ ಹಣಕಾಸು ಮೌಲ್ಯದಲ್ಲಿ 26.90 ಲಕ್ಷ ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಶೇಕಡಾವಾರು ಪ್ರಮಾಣದಲ್ಲಿ ಆಗಿರುವ ಇಳಿಕೆ ಶೇ.23.9ರಷ್ಟಾಗಿದೆ.

ಲಾಕ್‌ಡೌನ್ ನಿರ್ಬಂಧಗಳನ್ನು ನಿಧಾನವಾಗಿ ಸಡಿಲಿಸುತ್ತಾ ಬರಲಾಗಿದೆಯಾದರೂ, ಆರ್ಥಿಕ ಚಟುವಟಿಕೆಗಳ ಜೊತೆಗೆ ಮಾಹಿತಿ ಸಂಗ್ರಹಣೆಯ ಮೇಲೂ ಪರಿಣಾಮವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಕೊರೊನಾ ಸಾವುಗಳ ಸಂಖ್ಯೆ ಮುಚ್ಚಿಡುತ್ತಿರುವ ಸರ್ಕಾರ

**ಬೆಂಗಳೂರಿನಲ್ಲೇ 10 ಸಾವಿರ ಸಾವುಗಳ ಸಂಖ್ಯೆ ವ್ಯತ್ಯಾಸ - ಹೆಚ್.ಕೆ. ಪಾಟೀಲ್**

ಬೆಂಗಳೂರು, ಆ.31 - ಉದ್ದೇಶಪೂರ್ವಕವಾಗಿ ಕೊರೊನಾ ಸಾವಿನ ಸತ್ಯ ಮುಚ್ಚಿಡಲಾಗುತ್ತಿದೆ ಎಂದು ಆರೋಪಿಸಿದ ಮಾಜಿ ಸಚಿವ ಹೆಚ್.ಕೆ. ಪಾಟೀಲ್, ವಿರೋಧ ಪಕ್ಷಗಳು ಹಾಗೂ ತಜ್ಞರ ಸಭೆ ಕರೆದು ಪರಿಹಾರದ ಬಗ್ಗೆ ಚರ್ಚಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಸಾವಿನ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚುತ್ತಿವೆ ಎಂದು ಹೇಳಿದ್ದಾರೆ.

ಸಾವು ಹಾಗೂ ಸಾವಿನ ಕಾರಣಗಳ ಸಮೀಕ್ಷೆ ಮಾಡಬೇಕಿತ್ತು. ಆದರೆ ಈ ಬಾರಿ ಯಾವುದೇ ಸಮೀಕ್ಷೆ ಕೈಗೊಂಡಿಲ್ಲ. ಸತ್ಯಾಂಶ ಮರೆಮಾಚಲು ಸರ್ಕಾರ ಯತ್ನಿಸುತ್ತಿದೆ.


ಜನವರಿಯಿಂದ ಜುಲೈವರೆಗೆ 49,136 ಸಾವುಗಳು ಸಂಭವಿಸಿವೆ. ಸ್ಮಶಾನ, ಚಿತಾಗಾರ, ಖಬರಸ್ತಾನಗಳಿಂದ ಈ ಬಗ್ಗೆ ಮಾಹಿತಿ ದೊರೆತಿದೆ. ಬೆಂಗಳೂರಿನಲ್ಲಿ ಸಾವಿನ ಸಂಖ್ಯೆ 1,866 ಎಂದು ಮಾಹಿತಿ ನೀಡಲಾಗಿದೆ. ಆದರೆ 10 ಸಾವಿರ ಸಂಖ್ಯೆ ವ್ಯತ್ಯಾಸ ಆಗುತ್ತಿದೆ. ಬೆಂಗಳೂರಲ್ಲಿ ಕೊರೊನಾ ಹೊರತುಪಡಿಸಿ ಹತ್ತು ಸಾವಿರ ಸಾವುಗಳು ಹೆಚ್ಚಾಗಿವೆ. ಈ ಬಗ್ಗೆ ಸರ್ಕಾರ ಸಮಗ್ರ ಮಾಹಿತಿ ನೀಡಬೇಕು ಎಂದರು.

ಸಾವು ಹಾಗೂ ಸಾವಿನ ಕಾರಣಗಳ ಸಮೀಕ್ಷೆ ಮಾಡಬೇಕಿತ್ತು. ಆದರೆ ಈ ಬಾರಿ ಯಾವುದೇ ಸಮೀಕ್ಷೆ ಕೈಗೊಂಡಿಲ್ಲ. ಸತ್ಯಾಂಶ ಮರೆಮಾಚಲು ಸರ್ಕಾರ ಯತ್ನಿಸುತ್ತಿದೆ. ಹೀಗಾಗಿ ಸಮೀಕ್ಷೆ ಮಾಡಲು ಸರ್ಕಾರ ಹಿಂದೇಟು ಹಾಕುತ್ತಿದೆ ಎಂದು ಹೇಳಿದರು.

ಉಸಿರಾಟ ತೊಂದರೆ ಕಾರಣ ಶೇ. 8.5% ರಷ್ಟು ಸಾವುಗಳು ಸಂಭವಿಸಿವೆ. ಆಕ್ಸಿಜನ್ ಕೊರತೆ ನೀಗಿಸಲು ಕ್ರಮ ತೆಗೆದು ಕೊಂಡಿಲ್ಲ. ಸರ್ಕಾರದ ಬೇಜವಾಬ್ದಾರಿ ಮತ್ತೊಮ್ಮೆ ಬಯಲಾಗಿದೆ ಎಂದು ಟೀಕಿಸಿದರು.

ಕರ್ನಾಟಕದಲ್ಲಿ ಕೊರೊನಾ ದಿನೇ ದಿನೇ ಗಂಭೀರವಾಗುತ್ತಿದೆ. ರಾಷ್ಟ್ರೀಯ ಸರಾಸರಿಗಿಂತ ರಾಜ್ಯದಲ್ಲಿ ದುಪ್ಪಟ್ಟಾಗಿದೆ. ಬೆಂಗಳೂರಿನ ಪರಿಸ್ಥಿತಿ ಭಯಾನಕವಾಗಿದೆ ಎಂದು ಆರೋಪಿಸಿದರು. ಸರಿಯಾದ ಸಾವಿನ ಚಿತ್ರಣ ಯಾರಿಗೂ ಸಿಕ್ಕಿಲ್ಲ. ಈ ಬಗ್ಗೆ ಮುಖ್ಯಮಂತ್ರಿ ಉತ್ತರ (2ನೇ ಪುಟಕ್ಕೆ)

## ಅನ್‌ಲಾಕ್ ಬೆನ್ನಲ್ಲೇ ಬಾರ್ ರೆಸ್ಟೋರೆಂಟ್ ಓಪನ್



**ಇಂದಿನಿಂದ ಕ್ಲಬ್, ಪಬ್, ಬಾರ್ & ರೆಸ್ಟೋರೆಂಟ್‌ಗಳಿಗೆ ಮರು ಚಾಲನೆ**

ಬೆಂಗಳೂರು, ಆ. 31 - ಕೇಂದ್ರ ಸರ್ಕಾರ ನಾಲ್ಕನೆ ಹಂತದ ಅನ್‌ಲಾಕ್ ಪ್ರಕಟಿಸಿದ ಬೆನ್ನಲ್ಲೇ ರಾಜ್ಯದಲ್ಲಿ ಕಳೆದ 5 ತಿಂಗಳಿಂದ ಮುಚ್ಚಿದ್ದ ಕ್ಲಬ್, ಪಬ್, ಬಾರ್, ರೆಸ್ಟೋರೆಂಟ್‌ಗಳು ಮಂಗಳವಾರದಿಂದ ಆರಂಭಗೊಳ್ಳಲಿವೆ.

ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಬಕಾರಿ ಇಲಾಖೆ ಪ್ರತ್ಯೇಕವಾಗಿ ಆದೇಶಗಳನ್ನು ಹೊರಡಿಸಿದ್ದು, ಆರ್ಥಿಕ ಚಟುವಟಿಕೆ ಪುನಶ್ಚೇತನಗೊಳಿಸುವ ಉದ್ದೇಶದಿಂದ ಮೆಟ್ರೋ ರೈಲು ಸಂಚಾರವನ್ನು ಸೆಪ್ಟೆಂಬರ್ 7ರಿಂದ ಆರಂಭಿಸಲು ನಿರ್ಧರಿಸಲಾಗಿದೆ. ಆದರೆ, ಶಾಲಾ-ಕಾಲೇಜುಗಳು ಸೆಪ್ಟೆಂಬರ್ 30ರವರೆಗೂ ತೆರೆಯುವುದಿಲ್ಲ.

ಸೆಪ್ಟೆಂಬರ್ 20 ರ ನಂತರ 9ರಿಂದ 12ನೇ ತರಗತಿಯವರೆಗೆ ವಿದ್ಯಾರ್ಥಿಗಳು ಕಾಲೇಜುಗಳಿಗೆ ತೆರಳಿ ಶಿಕ್ಷಕರಿಂದ ಪಠ್ಯದ ಬಗ್ಗೆ ಮಾಹಿತಿ ಪಡೆಯಬಹುದು. ಗರಿಷ್ಠ 100 ಜನರ ಮಿತಿಗೆ ಒಳಪಟ್ಟು ಸಾಮಾಜಿಕ, ರಾಜಕೀಯ, ಕ್ರೀಡೆ, ಮನರಂಜನೆ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಕಾರ್ಯಗಳು ಮತ್ತು ಇತರೆ ಬೃಹತ್ ಸಭೆಗಳನ್ನು ಸೆಪ್ಟೆಂಬರ್ 20ರಿಂದ ನಡೆಸಲು ಅನುವು ಮಾಡಿಕೊಡಲಾಗಿದೆ. ಈ ಮಧ್ಯೆ ಬಾರ್ ಮತ್ತು ರೆಸ್ಟೋರೆಂಟ್ ಗಳು ನಾಳೆಯಿಂದ ಆರಂಭಗೊಳ್ಳಲಿದ್ದು, ಇದಕ್ಕಾಗಿ ಕೆಲವು ಮಾರ್ಗಸೂಚಿಗಳನ್ನು ಸರ್ಕಾರ ಹೊರಡಿಸಿದೆ.

ಮಾರ್ಗಸೂಚಿ ಅನುಸಾರ ಶೇ. 50ರಷ್ಟು ಗ್ರಾಹಕರಿಗೆ ಒಳಪ್ರವೇಶಿಸಲು ಅವಕಾಶ ನೀಡಲಾಗಿದೆ. ಯಾವುದೇ ಕಾರಣಕ್ಕೂ ಅದಕ್ಕಿಂತ ಹೆಚ್ಚಿನ ಮಂದಿಯನ್ನು ಸೇರಿಸುವಂತಿಲ್ಲ.

ಮಧ್ಯೆ ಅಂತರ ಕಡ್ಡಾಯಗೊಳಿಸಲಾಗಿದೆ, ಟೇಬಲ್‌ನಲ್ಲಿ ನಿಗದಿತ ಸಂಖ್ಯೆಯನ್ನು ನಿಗದಿಪಡಿಸಲಾಗಿದೆ, ಮದ್ಯ ವಿತರಿಸುವವರು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು.

ಕಳೆದ 5 ತಿಂಗಳಿಂದ (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ 255 ಪಾಸಿಟಿವ್ 6 ಸಾವು, 371 ಬಿಡುಗಡೆ

ದಾವಣಗೆರೆ, ಆ. 31-ಜಿಲ್ಲೆಯಲ್ಲಿ ಸೋಮವಾರ 255 ಜನರಿಗೆ ಕೊರೊನಾ ಸೋಂಕು ದೃಢಪಟ್ಟ ವರದಿಯಾಗಿದೆ. 6 ಜನರು ಸಾವನ್ನಪ್ಪಿದ್ದು, 371 ಜನರು ಕೋವಿಡ್ ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ.

ಜಿಲ್ಲೆಯಲ್ಲಿ ಈ ವರೆಗೆ 9486 ಜನರಲ್ಲಿ ಸೋಂಕು ದೃಢಪಟ್ಟಿದ್ದು, 7003 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ. ಪ್ರಸ್ತುತ 2292 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 134, ಹರಿಹರ 23, ಜಗಳೂರು 26, ಚನ್ನಗಿರಿ 38, ಹೊನ್ನಾಳಿ 26 ಹಾಗೂ ಹೊರ ಜಿಲ್ಲೆಯ 8 ಜನರಲ್ಲಿ ಸೋಂಕು (3ನೇ ಪುಟಕ್ಕೆ)

## ನ್ಯಾಯಾಂಗದ ಅವಹೇಳನ: ಭೂಷಣ್‌ಗೆ 1 ರೂ. ದಂಡ

ನವದೆಹಲಿ, ಆ. 31 – ನ್ಯಾಯಾಂಗದ ವಿರುದ್ಧ ಅವಹೇಳನಕಾರಿ ಟ್ವೀಟ್ ಮಾಡಿದ್ದಕ್ಕಾಗಿ ಕಾರ್ಯಕರ್ತ ವಕೀಲ ಪ್ರಶಾಂತ್ ಭೂಷಣ್‌ಗೆ ಸುಪ್ರೀಂ ಕೋರ್ಟ್ 1 ರೂ.ಗಳ ಸಾಂಕೇತಿಕ ದಂಡ ವಿಧಿಸಿದೆ.

ನ್ಯಾಯಮೂರ್ತಿ ಅರುಣ್ ಮಿಶ್ರಾ ನೇತೃತ್ವದ ಪೀಠ ಈ ತೀರ್ಪು ನೀಡಿದ್ದು, ಸೆಪ್ಟೆಂಬರ್ 15ರ ಒಳಗೆ ದಂಡ ಪಾವತಿಸಬೇಕು. ಇಲ್ಲದೇ ಹೋದರೆ 3 ತಿಂಗಳ ಜೈಲು ಹಾಗೂ ವಕೀಲಿಕೆಯಿಂದ ಮೂರು (3ನೇ ಪುಟಕ್ಕೆ)

## ಗ್ರಾಮ ಸೇವೆಗೆ ಪಿ.ಜಿ. ಮೀಸಲಾತಿ ರಾಜ್ಯಕ್ಕೆ ಅಧಿಕಾರವಿದೆ ಎಂದ ಸುಪ್ರೀಂ

ನವದೆಹಲಿ ಆ. 31 – ಗ್ರಾಮ ಹಾಗೂ ದುರ್ಗಮ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವ ಸರ್ಕಾರಿ ವೈದ್ಯರಿಗೆ ಪಿ.ಜಿ. ಪ್ರವೇಶದಲ್ಲಿ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ನ್ಯಾಯಮೂರ್ತಿ ಅರುಣ್ ಮಿಶ್ರ ಅವರ ನೇತೃತ್ವದ ಐವರು ಸದಸ್ಯರ ಸಂವಿಧಾನಿಕ ಪೀಠ ಈ ಬಗ್ಗೆ ಆದೇಶ ಹೊರಡಿಸಿದ್ದು, ರಾಜ್ಯಗಳು ಮೀಸಲಾತಿಗಾಗಿ ಶಾಸನ ರೂಪಿಸಬಹುದಾಗಿದೆ ಎಂದು ತಿಳಿಸಿದೆ.

ಈ ರೀತಿಯ ಮೀಸಲಾತಿಯನ್ನು ನಿರ್ಬಂಧಿಸಿ ಭಾರತೀಯ ವೈದ್ಯಕೀಯ ಮಂಡಳಿ (ಎಂ.ಸಿ.ಐ.) ರೂಪಿಸಿದ್ದ ನಿರ್ಬಂಧ ಸಂವಿಧಾನ ಬಾಹಿರ ಹಾಗೂ ಅತಾರ್ಕಿಕ ಎಂದು ನ್ಯಾಯಾಲಯ ಹೇಳಿದೆ.

ಎಂ.ಸಿ.ಐ. ಶಾಸನದಿಂದ (2ನೇ ಪುಟಕ್ಕೆ)


**ಇಂಜಿನಿಯರ್ ಬೆಳಗಾವಿ ವಿಜಯ್‌ಕುಮಾರ್ ನಿಧನ**



ದಾವಣಗೆರೆ ಸಿಟಿ, ಪಿ ಜೆ ಬಡಾವಣೆ ವಾಸಿ,
ಶ್ರೀಮತಿ ಹಾಲಮ್ಮ, ದಿ. ಬೆಳಗಾವಿ ಚಂದ್ರಶೇಖರಪ್ಪ ನವರ ಪುತ್ರ,
ಸಿವಿಲ್ ಇಂಜಿನಿಯರ್
ಶ್ರೀ ಬೆಳಗಾವಿ ವಿಜಯ್‌ಕುಮಾರ್ ಅವರು
ದಿನಾಂಕ 31.08.2020 ರ ಸೋಮವಾರ ಮಧ್ಯಾಹ್ನ 12.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 58 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ದುಃಖತಪ್ತ ಕುಟುಂಬ ವರ್ಗ
ಪತ್ನಿ : ಶ್ರೀಮತಿ ಗೀತಾ ವಿಜಯ್ ಕುಮಾರ್ ಬೆಳಗಾವಿ ಮತ್ತು ಮಕ್ಕಳು
ಬೆಳಗಾವಿ ವಂಶಸ್ಥರು, ದಾವಣಗೆರೆ, ಯು.ಕೆ. ವಂಶಸ್ಥರು, ಹಗರಿಬೊಮ್ಮನಹಳ್ಳಿ, ಡಿಎಂಟಿ ವಂಶಸ್ಥರು, ಚಳ್ಳಕೆರೆ. ಎನ್.ಕೆ. ವಂಶಸ್ಥರು, ದಾವಣಗೆರೆ
ಮೊ. : 9886963575, 9731297079, 9964391715, 9590209912

॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥
**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ತಾ॥ ಜಿಲ್ಲೆ॥, ಶಿರಮಗೊಂಡನಹಳ್ಳಿ ಗ್ರಾಮದ ವಾಸಿ
ಶ್ರೀಮತಿ ರತ್ನಮ್ಮ ಶ್ರೀ ಎಸ್.ಎ. ಮಹೇಶ್ವರಪ್ಪ
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ : 28.08.2020ನೇ ಶುಕ್ರವಾರ ಮಧ್ಯಾಹ್ನ 1.00 ಕ್ಕೆ ನಮ್ಮ ಪುತ್ರನಾದ
ಶ್ರೀ ಎ.ಎಂ. ರೇಣುಕರಾಜು
ಸಿ.ಇ.ಓ., ಕುಂದೂರು.
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆಯನ್ನು'
ದಿನಾಂಕ : 01.09.2020ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾ॥ ಜಿ॥ ಶಿರಮಗೊಂಡನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ದೀಪಾ ರೇಣುಕರಾಜು ಮತ್ತು ಮಕ್ಕಳು, ಹುಚ್ಚವ್ವನಹಳ್ಳಿ ವೀರಜ್ಜಿ ವಂಶಸ್ಥರು ಮತ್ತು ಅಜ್ಜಪ್ಪ ವಂಶಸ್ಥರು, ಶಿರಮಗೊಂಡನಹಳ್ಳಿ ಹಾಗೂ ಬಂಧು-ಮಿತ್ರರು

**ಬಿ.ಎಸ್. ಚನ್ನಬಸಪ್ಪ & ಸನ್ಸ್, ದಾವಣಗೆರೆ**
ನೂಲ ಅಷ್ಟಮಿ ಹಬ್ಬದ ಪ್ರಯುಕ್ತ
01-09-2020
ಮಂಗಳವಾರ ನಮ್ಮ ಎಲ್ಲಾ ಅಂಗಡಿಗಳಿಗೆ ರಜೆ ಇರುತ್ತದೆ.
ಗ್ರಾಹಕರು ಸಹಕರಿಬೇಕಾಗಿ ವಿನಂತಿ
ಕಾಳಿಕಾದೇವಿ ರಸ್ತೆ । ಎವಿಕೆ ಕಾಲೇಜು ರಸ್ತೆ । ಡೆಂಟಲ್ ಕಾಲೇಜು ರಸ್ತೆ

॥ ಶ್ರೀ ಗುರು ಬಸವ ಲಿಂಗಾಯ ನಮಃ ॥
**ಒಂಭತ್ತನೇ ವರ್ಷದ ಪುಣ್ಯಸ್ಮರಣೆ**



ಲಿಂ॥ ಶರಣ ಕೆ.ಎಂ. ಕೊಟ್ರೇಶಪ್ಪನವರು
ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರು
ಬಿ.ಕಲಪನಹಳ್ಳಿ
ನಿಧನ : 01.09.2011

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
ಪತ್ನಿ : ಶರಣೆ ಶರಣಮ್ಮನವರು
ಶರಣೆ ನಾಗರತ್ನ ಡಾ॥ ಎಂ. ಕೆ. ನಾಗಭೂಷಣ
ಚಿ॥ ಎಂ.ಎನ್. ಚಿನ್ಮಯ್, ಚಿ॥ ಎಂ.ಎನ್.ರಕ್ಷಿತ್
ಶರಣೆ ಕವಿತ ಡಾ॥ ಕೆ.ಎಂ. ಮಹಾಲಿಂಗಪ್ಪ,
ಚಿ॥ ಕೆ.ಎಂ. ಶಿವ ಪ್ರಸಾದ್, ಚಿ॥ ಕೆ.ಎಂ. ತಷನ್
ಲಿಂ॥ ನಾಗಮ್ಮ ಮತ್ತು ಲಿಂ॥ ಕೆ.ಎಂ. ಮಹಾಲಿಂಗಪ್ಪನವರ ಮಕ್ಕಳು, ಮೊಮ್ಮಕ್ಕಳು, ಬಿ.ಕಲಪನಹಳ್ಳಿ.

**ಜನ್ಮ ದಿನದ ಶುಭಾಶಯಗಳು**



ಇಂದು ಜನ್ಮ ದಿನದ ಸಂಭ್ರಮದಲ್ಲಿರುವ ಕಾಂಗ್ರೆಸ್ ಮುಖಂಡರು, ನೆಚ್ಚಿನ ಸ್ನೇಹಿತರು ಆಗಿರುವ
ಶ್ರೀ ಮೇಕಾ ಮುರುಳಿಕೃಷ್ಣ
ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.
ಭಗವಂತನು ಅವರಿಗೆ ಆಯುರಾರೋಗ್ಯ-ಐಶ್ವರ್ಯ-ಸುಖ-ಶಾಂತಿ-ನೆಮ್ಮದಿ ನೀಡಲೆಂದು ಪ್ರಾರ್ಥಿಸುತ್ತೇವೆ.

- ಡಾ॥ ತಿಮ್ಮಾರೆಡ್ಡಿ, ಮ್ಯಾನೇಜಿಂಗ್ ಟ್ರಸ್ಟಿ, ಅಂಜನಾದ್ರಿ ಎಜುಕೇಷನ್ ಟ್ರಸ್ಟ್, ದಾವಣಗೆರೆ.
- ಶ್ರೀರಾಮಮೂರ್ತಿ
- ಎನ್.ಎಸ್. ಕುಮಾರ್, ಬಾಲಾಜಿ ಟ್ರ್ಯಾಕ್ಟರ್ಸ್ , ದಾವಣಗೆರೆ.
- ಪಾರ್ಥಸಾರಥಿ, ಸಾಲಕಟ್ಟೆ
- ಜೆ.ಬಿ. ಶ್ರೀಧರ್, ವಿಶ್ವಾಸ್ ಸ್ಟೀಲ್ಸ್ ಅಂಡ್ ಸಿಮೆಂಟ್ಸ್, ದಾವಣಗೆರೆ.
- ಜಿ. ಸೂರ್ಯಪ್ರಕಾಶ್, ನಿಟ್ಟೂರು ಕ್ಯಾಂಪ್.
- ಎಂ.ವಿ.ವಿ.ಸತ್ಯನಾರಾಯಣ ಮೂರ್ತಿ, ದಾವಣಗೆರೆ.
- ಪುಟ್ಟಗುಂಟ ಶ್ರೀನಿವಾಸ್, ನೆಹರು ಕ್ಯಾಂಪ್.
- ವೈ. ವೇಣುಗೋಪಾಲರಾವ್, ನೆಹರು ಕ್ಯಾಂಪ್.
- ಕೆ. ರಘು, ಕೋಡಿಹಳ್ಳಿ ಕ್ಯಾಂಪ್.
- ದಿಲೀಪ್ ಕುಮಾರ್, ದಾವಣಗೆರೆ.
- ವಿನಯ್ ಕೆ.ಎಂ., ದಾವಣಗೆರೆ.
- ಜಿ.ಬಿ. ಶ್ರೀಕಂಠರಾಜು, ದೀಪ್ತಿ ಟೆಂಟ್ ಹೌಸ್.

# ಪ್ರಧಾನಿ ಆಕಾಂಕ್ಷಿಯಾಗಿ ರಾಷ್ಟ್ರಪತಿ ಭವನ ತಲುಪಿದ ಪ್ರಣಬ್, ಕೊನೆಯ ದಿನಗಳವರೆಗೂ ಜನತೆಯ ಒಡನಾಟ ಬಿಡದ ನಾಯಕ



ನವದೆಹಲಿ, ಆ. 31 – ಕಾಂಗ್ರೆಸ್‌ನ ಮೂವರು ಪ್ರಧಾನ ಮಂತ್ರಿಗಳ ನಂಬಿಕೆಯ ಬಂಟ ಹಾಗೂ ಪಕ್ಷದ ನಿಷ್ಠಾವಂತರಾಗಿದ್ದ ಪ್ರಣಬ್ ಮುಖರ್ಜಿ ಅವರು, ಪ್ರಧಾನ ಮಂತ್ರಿ ಹುದ್ದೆಯ ಮಹತ್ವಾಕಾಂಕ್ಷೆಯಿಂದ ಸ್ವಲ್ಪದರಲ್ಲೇ ದೂರ ಉಳಿದರಾದರೂ, ರಾಷ್ಟ್ರಪತಿ ಭವನ ತಲುಪುವ ಮೂಲಕ ದೇಶದ ಪ್ರಥಮ ಪ್ರಜೆಯಾದರು.

ದೇಶದ 13ನೇ ರಾಷ್ಟ್ರಪತಿಯಾಗಿದ್ದ ಮುಖರ್ಜಿ, ರಾಜಕೀಯ ದಿನಗಳಲ್ಲಿ ಕಾಂಗ್ರೆಸ್‌ನ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. ದೇಶದ ಅತ್ಯಂತ ಗೌರವಾನ್ವಿತ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದರು.

ಕೊನೆಯ ದಿನಗಳವರೆಗೂ ಜನತೆಯ ಒಡನಾಡಿಯಾಗಿದ್ದ ಮುಖರ್ಜಿ, ಆಗಸ್ಟ್ 10ರಂದು ತಮಗೆ ಕೊರೊನಾ ಸೋಂಕು ಬಂದಿರುವುದನ್ನು ಟ್ವಿಟ್ಟರ್ ಮೂಲಕ ತಿಳಿಸಿದ್ದರು. ಇದು ಸಾರ್ವಜನಿಕ ಜೀವನದಲ್ಲಿ ಅವರ ಕೊನೆಯ ಮಾತಾಗಿತ್ತು. ಸಮಸ್ಯೆಗಳು ಎದುರಾದಾಗಲೆಲ್ಲಾ ತ್ವರಿತವಾಗಿ ಬಗೆಹರಿಸುವ ದಕ್ಷತೆ ತೋರುತ್ತಾ ಬಂದಿದ್ದ ಮುಖರ್ಜಿ, ಸಾರ್ವಜನಿಕ ಜೀವನದಲ್ಲಿ ಎಂದೂ ನೇಪಥ್ಯಕ್ಕೆ ಸರಿದವರಲ್ಲ. ರಾಷ್ಟ್ರಪತಿ ಸ್ಥಾನ ತೊರೆದ ನಂತರವೂ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದರು. ಹಲವಾರು ಉಪನ್ಯಾಸಗಳು ಹಾಗೂ ಪುಸ್ತಕ ಬಿಡುಗಡೆ ಸಮಾರಂಭಗಳಲ್ಲಿ ಅವರು ಪಾಲ್ಗೊಳ್ಳುತ್ತಾ ಬಂದಿದ್ದರು.

ಪಶ್ಚಿಮ ಬಂಗಾಳದ ರಾಜಕಾರಣಿಯಾದ ಮುಖರ್ಜಿ, ಅಪಾರ ಜ್ಞಾಪಕ ಶಕ್ತಿ, ಹರಿತವಾದ ಬುದ್ಧಿವಂತಿಕೆ ಹಾಗೂ ವಿಷಯಗಳ ಕುರಿತ ಆಳವಾದ ತಿಳುವಳಿಕೆಯಿಂದ ರಾಜಕೀಯ ಸಾಧನೆಯ ಹಾದಿಯಲ್ಲಿ ಸಾಗಿದ್ದರು.

1982ರಲ್ಲಿ ಅವರು 47ನೇ ವಯಸ್ಸಿನಲ್ಲಿ ಹಣಕಾಸು ಸಚಿವರಾಗುವ ಮೂಲಕ ಅತ್ಯಂತ ಯುವ ಹಣಕಾಸು ಸಚಿವರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ನಂತರದ ದಿನಗಳಲ್ಲಿ ಅವರು ವಿದೇಶಾಂಗ, ರಕ್ಷಣೆ, ಹಣಕಾಸು ಹಾಗೂ ವಾಣಿಜ್ಯ ಸಚಿವಾಲಯಗಳನ್ನು ನಿರ್ವಹಿಸಿದ್ದರು. ಈ ಎಲ್ಲ ಸಚಿವಾಲಯಗಳನ್ನು ನಿಭಾಯಿಸಿದ ಮೊದಲ ರಾಷ್ಟ್ರಪತಿ ಅವರಾಗಿದ್ದರು.

ಇಂದಿರಾ ಗಾಂಧಿ, ಪಿ.ವಿ. ನರಸಿಂಹ ರಾವ್ ಹಾಗೂ ಮನಮೋಹನ್ ಸಿಂಗ್ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಅವರ ಜೊತೆ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ಮುಖರ್ಜಿ ಅವರದ್ದಾಗಿದೆ.

ಪ್ರಧಾನ ಮಂತ್ರಿಯಾಗಿರದೆ ಎಂಟು ವರ್ಷ ಕಾಲ ಲೋಕಸಭೆಯ ನಾಯಕರಾದ ಕೀರ್ತಿಯೂ ಅವರದ್ದಾಗಿದೆ. ಅವರು 1980-85ರ ಅವಧಿಯಲ್ಲಿ ರಾಜ್ಯಸಭಾ ನಾಯಕರೂ ಆಗಿದ್ದರು.

1969ರಲ್ಲಿ ಬಾಂಗ್ಲಾ ಕಾಂಗ್ರೆಸ್ ಸದಸ್ಯರಾಗಿದ್ದ ಅವರು, ರಾಜ್ಯಸಭೆಗೆ ಆಯ್ಕೆಯಾಗಿದ್ದರು. ನಂತರ ಈ ಪಕ್ಷ ಕಾಂಗ್ರೆಸ್‌ನಲ್ಲಿ ವಿಲೀನವಾಯಿತು.

2012ರಲ್ಲಿ ರಾಷ್ಟ್ರಪತಿಯಾಗುವುದಕ್ಕೆ ಮುಂಚೆ ಅವರು 39 ಸಚಿವರ ಸಮಿತಿಗಳ ಪೈಕಿ 24ಕ್ಕೆ ಮುಖ್ಯಸ್ಥರಾಗಿದ್ದರು.

ರಾಜಕೀಯ ವಲಯದಲ್ಲಿ ಸರ್ವಸಮ್ಮತಿ ಮೂಡಿಸುವ ವ್ಯಕ್ತಿ ಎಂದೇ ಮುಖರ್ಜಿ ಗುರುತಿಸಲ್ಪಟ್ಟಿದ್ದರು. ಹಲವಾರು ರಾಜಕೀಯ ಪಕ್ಷಗಳಲ್ಲಿ ವಿಶ್ವಾಸಾರ್ಹತೆ ಹೊಂದಿದ್ದ ಮುಖರ್ಜಿ, ಚುನಾವಣಾ ಸಮಯದಲ್ಲಿ ರಾಷ್ಟ್ರಪತಿಯಾಗುವ ಮೂಲಕ ಉಪಯುಕ್ತತೆ ಸಾಬೀತು ಪಡಿಸಿದ್ದರು.

ಸುದೀರ್ಘ ರಾಜಕೀಯ ಹಾದಿಯಲ್ಲಿ ಸಾಗಿ ಬಂದ ಮುಖರ್ಜಿ, ರಾಷ್ಟ್ರಪತಿ ಭವನವನ್ನು ಅಲಂಕರಿಸುವುದರೊಂದಿಗೆ ತಮ್ಮ ರಾಜಕೀಯ ಜೀವನ ಪೂರ್ಣಗೊಳಿಸಿದರು. ಆದರೆ, ಪ್ರಧಾನ ಮಂತ್ರಿ ಆಕಾಂಕ್ಷಿಯಾಗಿದ್ದರೂ ಆ ಹುದ್ದೆ ಕೊನೆವರೆಗೂ ಅವರಿಗೆ ಲಭಿಸಲೇ ಇಲ್ಲ.

'ದಿ ಕೊಯಲೇಷನ್ ಎರಾ' ಎಂಬ ಪುಸ್ತಕ ಬರೆದಿದ್ದ ಮುಖರ್ಜಿ, ತಮಗೆ ಪ್ರಧಾನ ಮಂತ್ರಿ ಹುದ್ದೆಯ ಅಪೇಕ್ಷೆ ಇದ್ದುದನ್ನು ತಿಳಿಸಿದ್ದರು. ಪ್ರಧಾನಿಯಾಗುವ ಬಯಕೆಯನ್ನು ಅವರು ಗೌಪ್ಯವಾಗೇನೂ ಇಟ್ಟರಲಿಲ್ಲ. 2004ರಲ್ಲಿ ಸೋನಿಯಾ ಗಾಂಧಿ ಪ್ರಧಾನ ಮಂತ್ರಿಯಾಗಲು ನಿರಾಕರಿಸಿದಾಗ, ಪ್ರಣಬ್ ಆ ಹುದ್ದೆಗೆ ಬರುವ ಬಯಕೆ ಹೊಂದಿದ್ದರು. ಆದರೆ, ಅಂತಿಮವಾಗಿ ಆ ಹುದ್ದೆ ಡಾ. ಮನಮೋಹನ್ ಸಿಂಗ್ ಅವರ ಪಾಲಾಯಿತು. ಒಂದು ಕಾಲದಲ್ಲಿ ತಮ್ಮ ಕಿರಿಯರಾಗಿದ್ದ ಸಿಂಗ್ ಅವರ ಸಂಪುಟಕ್ಕೆ ಸೇರ್ಪಡೆಯಾಗಲು ನಾನು ನಿರಾಕರಿಸಿದ್ದೆ ಎಂದೂ ಪ್ರಣಬ್ ಹೇಳಿದ್ದರು.

ಆದರೆ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಒತ್ತಾಯದ ನಂತರ ಅವರು ಸಚಿವ ಸ್ಥಾನ ಅಂಗೀಕರಿಸಿದ್ದರು. 2004ರ ನಂತರದಲ್ಲಿ ಕಾಂಗ್ರೆಸ್ ಮೈತ್ರಿ ಸರ್ಕಾರ ಸಂಕಷ್ಟ ಎದುರಿಸಿದ ಸಂದರ್ಭಗಳಲ್ಲೆಲ್ಲಾ ಮುಖರ್ಜಿ ನೆರವಿನ ಹಸ್ತ ಚಾಚಿದ್ದರು. ಅಂತಿಮವಾಗಿ ಅವರು ಜುಲೈ 25, 2012ರಂದು ರಾಷ್ಟ್ರಪತಿಯಾದರು.

ಡಿಸೆಂಬರ್ 11, 1935ರಂದು ಪಶ್ಚಿಮ ಬಂಗಾಳದ ಬಿರ್ಭುಮ್ ಜಿಲ್ಲೆಯ ಮಿರಾತಿ ಎಂಬ ಸಣ್ಣ ಹಳ್ಳಿಯಲ್ಲಿ ಜನಿಸಿದ್ದ ಮುಖರ್ಜಿ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ತಮ್ಮ ಪೋಷಕರಿಂದ ಜೀವನದ ಆರಂಭಿಕ ಪಾಠ ಕಲಿತಿದ್ದರು. ಅವರ ತಂದೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಲವು ಬಾರಿ ಜೈಲಿಗೆ ಹೋಗಿ, ಕುಟುಂಬ ಆರ್ಥಿಕ ಸಂಕಷ್ಟಕ್ಕೂ ಸಿಲುಕಿತ್ತು.

ಈ ಕಷ್ಟದ ದಿನಗಳನ್ನು ಎಂದೂ ಮರೆಯದ ಮುಖರ್ಜಿ, ಅಧಿಕಾರದ ಉನ್ನತ ಹಂತಗಳಿಗೆ ತಲುಪಿದರೂ, ದುರ್ಗಾ ಪೂಜೆ ಮಾಡಲು ತಮ್ಮ ಗ್ರಾಮಕ್ಕೆ ಬರುತ್ತಿದ್ದರು. ಸಚಿವರಾಗಿ ಹಾಗೂ ನಂತರದಲ್ಲಿ ರಾಷ್ಟ್ರಪತಿಯಾದ ನಂತರವೂ ಧೋತಿ ಉಟ್ಟು ಪೂಜೆ ನಡೆಸುವ ಚಿತ್ರಗಳನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡುತ್ತಿದ್ದರು.

2015ರಲ್ಲಿ ಪತ್ನಿ ಸುವ್ರ ಮುಖರ್ಜಿ ಅವರನ್ನು ಕಳೆದುಕೊಂಡ ಮುಖರ್ಜಿ, ಇಬ್ಬರು ಮಕ್ಕಳಾದ ಇಂದ್ರಜಿತ್ ಹಾಗೂ ಅಭಿಜಿತ್ ಹಾಗೂ ಮಗಳಾದ ಷರ್ಮಿಷ್ಠ ಅವರನ್ನು ಅಗಲಿದ್ದಾರೆ.

ಐದು ಬಾರಿ ರಾಜ್ಯಸಭಾ ಸದಸ್ಯರಾಗಿ ಹಾಗೂ ಎರಡು ಬಾರಿ ಲೋಕಸಭಾ ಸದಸ್ಯರಾಗಿದ್ದ ಮುಖರ್ಜಿ, ಸುದೀರ್ಘ ಕಾಲ ಸಂಸದರಾಗಿ ಕಾರ್ಯ ನಿರ್ವಹಿಸಿದ ನಾಯಕರಲ್ಲಿ ಒಬ್ಬರಾಗಿದ್ದಾರೆ. 1977ರಲ್ಲಿ ಮಾಲ್ಡಾ ಹಾಗೂ 1980ರಲ್ಲಿ ಬೋಲಪುರ ಲೋಕಸಭಾ ಕ್ಷೇತ್ರಗಳಲ್ಲಿ ಅವರು ಸೋಲು ಸಹ ಕಂಡಿದ್ದರು.

### ಆರ್.ಎಸ್.ಎಸ್. ಜೊತೆ ವಿವಾದ

2018ರಲ್ಲಿ ರಾಷ್ಟ್ರಪತಿ ಸ್ಥಾನದಿಂದ ನಿರ್ಗಮಿಸಿದ ನಂತರ ಪ್ರಣಬ್ ಮುಖರ್ಜಿ ಅವರು ನಾಗಪುರದಲ್ಲಿರುವ ಆರ್.ಎಸ್.ಎಸ್. ಕೇಂದ್ರ ಕಚೇರಿಗೆ ಭೇಟಿ ನೀಡಿದ್ದು ಭಾರೀ ವಿವಾದಕ್ಕೆ ಕಾರಣವಾಗಿತ್ತು. ಆರ್.ಎಸ್.ಎಸ್.ನ ಸಭೆಯ ಸಮಾರೋಪ ಭಾಷಣ ಮಾಡಿದ್ದ ಮುಖರ್ಜಿ ಅವರ ಕ್ರಮಕ್ಕೆ ರಾಜಕೀಯ ವಲಯದಲ್ಲಿ ಆಕ್ಷೇಪಗಳು ವ್ಯಕ್ತವಾಗಿದ್ದವು.

ಆನಂತರದಲ್ಲಿ 2019ರಲ್ಲಿ ಅವರಿಗೆ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ದೇಶದ ಸರ್ವೋನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನ ಪ್ರಕಟಿಸಿತ್ತು. ಇದೂ ಸಹ ಚರ್ಚೆಯ ವಿಷಯವಾಗಿತ್ತು.

## ಡ್ರಗ್ಸ್ ಪ್ರಕರಣದಲ್ಲಿ ಚಿರು ಹೆಸರು ತಂದಿದ್ದು ಬೇಸರ ತರಿಸಿದೆ : ನಟ ದರ್ಶನ್



ದಾವಣಗೆರೆ, ಆ.31- ಕನ್ನಡ ಚಿತ್ರರಂಗದಲ್ಲಿನ ಡ್ರಗ್ಸ್ ಪ್ರಕರಣದಲ್ಲಿ ನಟ ದಿ. ಚಿರಂಜೀವಿ ಸರ್ಜಾ ಹೆಸರನ್ನು ಪ್ರಸ್ತಾಪಿಸುತ್ತಿರುವುದರಿಂದ ತನಗೆ ತುಂಬಾ ಬೇಸರವಾಗಿದೆ ಎಂದು ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ನೋವು ಹೊರಹಾಕಿದ್ದಾರೆ.

ಕಾರ್ಯನಿಮಿತ್ತ ನಗರಕ್ಕೆ ಭೇಟಿ ನೀಡಿದ್ದ ಅವರು, ಬಾಪೂಜಿ ಅತಿಥಿ ಗೃಹದಲ್ಲಿ ಇಂದು ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದರು.

ಒಂದು ತರಗತಿಯಲ್ಲಿ ಫಸ್ಟ್ ರ್‍ಯಾಂಕ್ ವಿದ್ಯಾರ್ಥಿ ಇರುವಂತೆ ಝೀರೋ ಅಂಕ ಪಡೆದ ವಿದ್ಯಾರ್ಥಿ ಸಹ ಇರುತ್ತಾನೆ. ಹಾಗಂತ ಇಡೀ ಕ್ಲಾಸ್ ಝೀರೋ ಎಂದರೆ ಹೇಗೆ ಎಂದು ಡ್ರಗ್ಸ್ ವಿಚಾರದಲ್ಲಿ ಇಡೀ ಕನ್ನಡ ಚಿತ್ರರಂಗವನ್ನೇ ದೂಷಿಸುವುದು ತಪ್ಪು ಎಂದು ಬೇಸರ ವ್ಯಕ್ತಪಡಿಸಿದರು.

ಚಿರು ಸತ್ತು ಎಲ್ಲಿ ಇದಾನೋ ಏನು ಮಾಡುತ್ತಿದ್ದಾನೋ ಗೊತ್ತಿಲ್ಲ. ಡ್ರಗ್ಸ್ ಜಾಲದಲ್ಲಿ ಚಿರು ಹೆಸರು ಬರ್ತಾ ಇರುವುದು ಬೇಸರ ತರಿಸಿದೆ. ಹಾಗೇನಾದರೂ ಕೇಸ್ ಆಗಿ ಪ್ರೂ ಆಯಿತು ಅಂದರೆ ಅವನಿಗೆ ಶಿಕ್ಷೆ ಕೊಡಲು ಸಾಧ್ಯವೇ. ನನಗೆ ನಮ್ಮ ಹಿರಿಯರು ಹೇಳಿ ಕೊಟ್ಟಿರುವುದೇನೆಂದರೆ ಸತ್ತವನು ನಮ್ಮ ಶತ್ರುವೇ ಆಗಿರಲಿ ಒಳ್ಳೆಯ ಮಾತಾಡಬೇಕಂತೆ. ಅದಕ್ಕಾಗಿಯೇ ವರ್ಷದ ತಿಥಿ ಮಾಡೋದು. ಆದರೆ ಸತ್ತವರ ಮೇಲೆ ಹೀಗೆ ಮಾತನಾಡಬಾರದು ಎಂದರು.

ಪೊಲೀಸ್ ಇಲಾಖೆ ತನಿಖೆ ನಡೆಸುತ್ತಿದ್ದು, ಅದನ್ನು ಕಾದು ನೋಡೋಣ ಏನು ಆಗುತ್ತೆ. ಈ ಡ್ರಗ್ಸ್ ಅನ್ನೋದು ಕೇವಲ ಕನ್ನಡ ಚಿತ್ರರಂಗದಲ್ಲಿ ಮಾತ್ರವಲ್ಲ. ಎಲ್ಲಾ ಕಡೆ ಇರಬಹುದು. ತನಿಖೆ ನಡೆಯಲಿ ಆಮೇಲೆ ನೋಡೋಣವೆಂದರು.

ನಿರ್ದೇಶಕ ಇಂದ್ರಜಿತ್ ಲಂಕೇಶ್ ಆರೋಪದ ಬಗ್ಗೆ ಉತ್ತರಿಸಿದ ದರ್ಶನ್, ಇನ್ನೊಬ್ಬರ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ. ಅಲ್ಲದೆ ಈ ಡ್ರಗ್ಸ್ ಕೇಸ್ ಇಡೀ ಕನ್ನಡ ಚಿತ್ರರಂಗಕ್ಕೆ ಮಾತ್ರ ಅಲ್ಲ. ಇಡೀ ಕರ್ನಾಟಕಕ್ಕೆ ಕೆಟ್ಟ ಹೆಸರು. ನಾನು ಕೂಡ 26-27 ವರ್ಷದಿಂದ ಸಿನಿಮಾ ರಂಗದಲ್ಲಿದ್ದೀನಿ. ಲೈಟ್ ಬಾಯ್ ಯಿಂದ ಇಲ್ಲಿಯವರೆಗೂ ಬೆಳೆದಿದ್ದೇನೆ. ಇದುವರೆಗೂ ನನಗೆ ಈ ರೀತಿಯ ಅನುಭವವಾಗಿಲ್ಲ ಎಂದರು.

**ದಚ್ಚುಗೆ ಎಸ್ಸೆಸ್ಸೆಂ ಕುದುರೆ ಕೊಡುಗೆ:** ದಾವಣಗೆರೆಗೆ ಬಂದಿದ್ದು ತನಗೆ ಖುಷಿಯಾಗಿದೆ. ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಒಳ್ಳೆಯ ಕುದುರೆಗಳನ್ನು ಸಾಕಿದ್ದಾರೆ. ಅವುಗಳನ್ನು ತೆಗೆದುಕೊಂಡು ಹೋಗಲು ಬಂದಿದ್ದೇನೆ. ಮೊನ್ನೆ ಮರಿ ಹಾಕಿದ್ವಂತೆ. ಕೇಳಿದ್ದಕ್ಕೆ ತೆಗೆದುಕೊಂಡು ಹೋಗುವಂತೆ ಮಲ್ಲಣ್ಣ ಸಮ್ಮತಿಸಿದ್ದರು. ಅದಕ್ಕೆ ಬಂದೆ. ಪ್ರೀತಿಯಿಂದ ಮಲ್ಲಣ್ಣನವರು ನನಗೆ ಎರಡು ಕುದುರೆ ನೀಡಿದ್ದಾರೆ, ಖರೀದಿ ಮಾಡಿಲ್ಲವೆಂದರು.

ಲಾಕ್ ಡೌನ್ ಟೈಂ ನಲ್ಲಿ ನನಗೆ ಕೆಲಸ ಇಲ್ಲವಾಗಿದೆ. ಹೀಗಾಗಿ ಕುರಿ, ಕೋಳಿ, ಕುದುರೆ ಸಾಕಾಣಿಕೆ ಮಾಡುತ್ತಿದ್ದೇನೆ. ನಿಮ್ಮ ಮನೆಯಲ್ಲಿ ಒಳ್ಳೆಯ ಕುದುರೆ ಸಾಕಿ ನಾನು ನಿಮ್ಮ ಮನೆಗೂ ಬರ್ತೀನಿ ಎಂದರು. ಅಪ್ಪಾಜ್ಜಿ ಅಂಬರೀಷ್ ಹಾಗೂ ಮಲ್ಲಣ್ಣ ಇಬ್ಬರೂ ಒಳ್ಳೆಯ ಫ್ರೆಂಡ್ಸ್. ಅಪ್ಪಾಜಿ ಅಂಬರೀಷ್ ಫ್ರೆಂಡ್ಸ್ ನನಗೆ ಹಿರಿಯರ ಸಮಾನವೆಂದರು.

## ಕೋವಿಡ್‌ನಿಂದ ಮೃತಪಟ್ಟ ಪಿಡಿಓ ಕುಟುಂಬಕ್ಕೆ ಸರ್ಕಾರಿ ಸೌಲಭ್ಯ ನೀಡಲು ಒತ್ತಾಯ



ದಾವಣಗೆರೆ, ಆ.31- ಕೋವಿಡ್ ಸೋಂಕಿಗೆ ಬಲಿಯಾದ ಚನ್ನಗಿರಿ ತಾಲ್ಲೂಕು ಮಲ್ಲಾಪುರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕುಟುಂಬಕ್ಕೆ ಸರ್ಕಾರದಿಂದ ಸಿಗಬೇಕಾದ ಗರಿಷ್ಠ ಸೌಲಭ್ಯವನ್ನು ತ್ವರಿತವಾಗಿ ದೊರಕಿಸಿ ಕೊಡಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ರಾಜ್ಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ದಾವಣಗೆರೆ ತಾಲ್ಲೂಕು ಘಟಕದ ನೇತೃತ್ವದಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗೆ ಪಿಡಿಓಗಳು ಮನವಿ ಸಲ್ಲಿಸಿದರು.

ಕೊರೊನಾ ವಿರುದ್ಧದ ಹೋರಾಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಾಕಷ್ಟು ಹೋರಾಟ ಮಾಡುತ್ತಿದ್ದಾರೆ. ಸೋಂಕು ನಿಯಂತ್ರಣಕ್ಕಾಗಿ ತಮ್ಮ ವೈಯಕ್ತಿಕ ಜೀವ ಮತ್ತು ಜೀವನವನ್ನು ಲೆಕ್ಕಿಸದೇ ಹೋರಾಟ ಮಾಡುತ್ತಿದ್ದಾರೆ. ಕರ್ತವ್ಯ ನಿರ್ವಹಣೆ ಸಂದರ್ಭದಲ್ಲಿ ಸಾಕಷ್ಟು ಮಾನಸಿಕ ಒತ್ತಡ ಹಾಗೂ ಇತರೆ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ ಎಂದು ಮನವಿಯಲ್ಲಿ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಹೀಗೆ ಕರ್ತವ್ಯ ನಿರ್ವಹಣೆಯಲ್ಲಿದ್ದಾಗಲೇ ಮಲ್ಲಾಪುರ ಗ್ರಾಪಂ ಪಿಡಿಓ ಶೇಖರಪ್ಪ ಅವರು ಸೋಂಕಿಗೆ ತುತ್ತಾಗಿ ಚಿಕಿತ್ಸೆ ಫಲಕಾರಿಯಾಗದೇ ನಿನ್ನೆ ಮೃತಪಟ್ಟಿದ್ದಾರೆ. ಅವರ ಅಗಲಿಕೆಯಿಂದಾಗಿ ಆ ಕುಟುಂಬ ಸಂಕಷ್ಟಕ್ಕೆ ಸಿಲುಕಿದ್ದು, ಸರ್ಕಾರದಿಂದ ದೊರೆಯುವ ಗರಿಷ್ಠ ಸೌಲಭ್ಯವನ್ನು ಅವರಿಗೆ ಶೀಘ್ರವಾಗಿ ದೊರಕಿಸಿ ಕೊಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಕೊರೊನಾ ವಾರಿಯರ್ಸ್ ಆಗಿ ಕರ್ತವ್ಯ ನಿರತ ಪಿಡಿಓ ಅನಾರೋಗ್ಯದ ಕಾರಣದಿಂದ ಚಿಕಿತ್ಸೆ ಮತ್ತು ವಿಶ್ರಾಂತಿಗಾಗಿ ರಜೆ ಕೋರಿದಾಗ ಪರಿಸ್ಥಿತಿಯ ಗಂಭೀರತೆ ಅರಿತುಕೊಂಡು ತಿರಸ್ಕರಿಸದೇ ರಜೆ ನೀಡಬೇಕು, ಕೊರೊನಾ ಸೋಂಕಿನ ಕಠಿಣ ಪರಿಸ್ಥಿತಿಯಲ್ಲಿಯೂ ಇತರೆ ಕಾರ್ಯಕ್ರಮಗಳಲ್ಲಿ ಅನಗತ್ಯವಾಗಿ ಗುರಿ ನೀಡಿ ಮತ್ತಷ್ಟು ಮಾನಸಿಕ ಒತ್ತಡ ನೀಡುವುದನ್ನು ನಿಲ್ಲಿಸಬೇಕು, ಹಲವಾರು ಯೋಜನೆಗಳಿಗೆ ವಾರದಲ್ಲಿ ಒಂದು ಎರಡರಂತೆ ವಿಡಿಯೋ ಸಂವಾದ ಏರ್ಪಡಿಸಿದಾಗ ಪಿಡಿಓಗಳ ಕೊಂದುಕೊರತೆಗಳನ್ನು ಆಲಿಸಲು ತಿಂಗಳಿಗೆ ಒಮ್ಮೆಯಾದರೂ ಸಂವಾದ ಮಾಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ದಾವಣಗೆರೆ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳು ಇದ್ದರು.

## ಪ್ರಣಬ್ ಮುಖರ್ಜಿ ನಿಧನಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ

ದಾವಣಗೆರೆ, ಆ.31- ಮಾಜಿ ರಾಷ್ಟ್ರಪತಿ, ಭಾರತ ರತ್ನ ಪ್ರಣಬ್ ಮುಖರ್ಜಿ ಅವರ ನಿಧನಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದರು. ಮುಖರ್ಜಿ ಅವರ ನಿಧನದಿಂದ ರಾಷ್ಟ್ರಕ್ಕೆ ತುಂಬಲಾರದ ನಷ್ಟವುಂಟಾಗಿದ್ದು, ಅವರ ಅಗಲಿಕೆಯಿಂದ ಉಂಟಾಗಿರುವ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಆ ಭಗವಂತನು ಅವರ ಕುಟುಂಬ ವರ್ಗದವರಿಗೆ ನೀಡಲಿ ಎಂದು ಅವರುಗಳು ಪ್ರಾರ್ಥಿಸಿದ್ದಾರೆ.

## ಮುಖರ್ಜಿ ನಿಧನ ದೇಶಕ್ಕಾದ ನಷ್ಟ : ಸಂಸದ ಸಿದ್ದೇಶ್ವರ

ದಾವಣಗೆರೆ, ಆ.31- ದೇಶದ 13ನೇ ರಾಷ್ಟ್ರಪತಿಯಾಗಿ, ಕೇಂದ್ರದ ವಿವಿಧ ಇಲಾಖೆಗಳ ಸಚಿವರಾಗಿ, ಪತ್ರಕರ್ತರಾಗಿ ಕಾರ್ಯ ನಿರ್ವಹಿಸಿದ ಪ್ರಣಬ್ ಮುಖರ್ಜಿಯವರ ನಿಧನ ನಿಜಕ್ಕೂ ದೇಶಕ್ಕಾದ ದೊಡ್ಡ ನಷ್ಟ. ಭಾರತವು ಅಭಿವೃದ್ಧಿ ಪಥದಲ್ಲಿ ಅಳಿಸಲಾಗದ ಗುರುತು ಹಾಕಿದ ಧೀಮಂತ ನಾಯಕ ಪ್ರಣಬ್ ಮುಖರ್ಜಿ. ಇಂತಹ ಅಪ್ರತಿಮ ನಾಯಕ ನಿಧನರಾಗಿರುವುದು ದೇಶಕ್ಕೆ ನಿಜಕ್ಕೂ ತುಂಬಲಾರದ ನಷ್ಟ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಅವರು ತಿಳಿಸಿದ್ದಾರೆ.

## ಬಾರ್ & ರೆಸ್ಟೋರೆಂಟ್ ಓಪನ್

**(1ನೇ ಪುಟದಿಂದ)** ರೆಸ್ಟೋರೆಂಟ್‌ಗಳನ್ನು ಮುಚ್ಚಿದ್ದರಿಂದ ರಾಜ್ಯ ಸರ್ಕಾರಕ್ಕೆ ಸಾವಿರದ ಐದು ನೂರು ಕೋಟಿ ರೂಪಾಯಿ ನಷ್ಟ ಉಂಟಾಗಿದೆ. ಮೂರನೇ ಹಂತದ ಲಾಕ್‌ಡೌನ್ ತೆರವುಗೊಳಿಸಿದ ನಂತರ ಬಾರ್‌ಗಳಲ್ಲಿ ಮದ್ಯ ಪಾರ್ಸೆಲ್‌ಗೆ ಅವಕಾಶ ನೀಡಲಾಗಿತ್ತು.

## ಜಿಲ್ಲಾ ಬಿಜೆಪಿ ಎಸ್ಟಿ ಮೋರ್ಚಾಕ್ಕೆ ನೇಮಕ

ದಾವಣಗೆರೆ, ಆ.31- ಜಿಲ್ಲಾ ಬಿಜೆಪಿ ಎಸ್ಟಿ ಮೋರ್ಚಾದ ಪದಾಧಿಕಾರಿಗಳನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ.ವೀರೇಶ್ ಹನಗವಾಡಿ ಅವರ ಆದೇಶದ ಮೇರೆಗೆ ಎಸ್ಟಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಕೆ.ಎಸ್.ಕೃಷ್ಣಕುಮಾರ್ ಅವರು ನೇಮಕ ಮಾಡಿದ್ದಾರೆ.

ಅಧ್ಯಕ್ಷರು : ಕೆ.ಎಸ್.ಕೃಷ್ಣಕುಮಾರ್ (ಮಾಯಕೊಂಡ)

ಉಪಾಧ್ಯಕ್ಷರು : ಬಿ.ತಿಮ್ಮಯ್ಯ (ಚನ್ನಗಿರಿ), ಚಂದಪ್ಪ (ಹೊನ್ನಾಳಿ), ಮಹೇಶ್ವರಪ್ಪ (ದಾವಣಗೆರೆ ಉತ್ತರ), ಬಿ.ಎಸ್.ತಿಪ್ಪೇಶ್ (ಮಾಯಕೊಂಡ), ಡಿ.ಹೆಚ್.ಹಾಲೇಶಪ್ಪ (ದಾವಣಗೆರೆ ದಕ್ಷಿಣ)

ಪ್ರಧಾನ ಕಾರ್ಯದರ್ಶಿಗಳು : ಹೆಚ್.ಬಿ.ದುರುಗೇಶ್ (ದಾವಣಗೆರೆ ಉತ್ತರ), ಬಿ.ಎನ್. ಸಿದ್ದಪ್ಪ (ಹರಿಹರ ಗ್ರಾಮಾಂತರ)

ಕಾರ್ಯದರ್ಶಿಗಳು : ರವಿಕುಮಾರ್ (ಜಗಳೂರು), ಬಿ.ತಿಪ್ಪೇಸ್ವಾಮಿ (ಹರಿಹರ), ಬಿ.ಕೆ.ಕರಿಬಸಪ್ಪ (ಹೊನ್ನಾಳಿ), ಸುನೀಲ್ ಕುಮಾರ್ (ದಾವಣಗೆರೆ ಉತ್ತರ), ಹೆಚ್.ಎನ್.ಅನಿಲ್ ಕುಮಾರ್ (ದಾವಣಗೆರೆ ದಕ್ಷಿಣ),

ಕೋಶ್ಯಾಧ್ಯಕ್ಷರು : ಶ್ರೀನಿವಾಸ (ಜಗಳೂರು)

ಸದಸ್ಯರುಗಳು: ಕೆಂಚನಗೌಡ (ಜಗಳೂರು), ಹೆಚ್.ಕೃಷ್ಣಮೂರ್ತಿ (ಮಾಯಕೊಂಡ), ರಮೇಶ್ (ಹೊನ್ನಾಳಿ), ಹೆಚ್.ಎಸ್.ಮಾರುತಿ (ಮಾಯಕೊಂಡ), ಚಂದ್ರಪ್ಪ (ದಾವಣಗೆರೆ ಉತ್ತರ) ಬೆಳಗೆರೆ ನಾಗರಾಜ್ (ಹರಿಹರ), ಕೆ.ಪಿ. ನಾಗರಾಜ್ (ಚನ್ನಗಿರಿ), ಹನುಮಂತಪ್ಪ (ಹೊನ್ನಾಳಿ), ಶ್ರೀಕಾಂತ (ಹರಿಹರ ಗ್ರಾಮಾಂತರ), ಹೆಚ್. ಮಂಜುನಾಥ್ (ಮಾಯಕೊಂಡ), ರೇವಣ್ಣ (ಚನ್ನಗಿರಿ)

## ಮುಖರ್ಜಿ ನಿಧನಕ್ಕೆ ಶರಣರ ಸಂತಾಪ

ಚಿತ್ರದುರ್ಗ, ಆ.31- ಹಿರಿಯ ರಾಜಕೀಯ ಮುತ್ಸದ್ದಿ, ಮಾಜಿ ರಾಷ್ಟ್ರಪತಿ, ಭಾರತ ರತ್ನ ಪ್ರಣಬ್ ಮುಖರ್ಜಿ ಅವರ ನಿಧನದಿಂದ ರಾಷ್ಟ್ರಕ್ಕೆ ತುಂಬಲಾರದ ನಷ್ಟವುಂಟಾಗಿದೆ ಎಂದು ಡಾ.ಶಿಮೂರ್ತಿ ಮುರುಘಾ ಶರಣರು ತೀವ್ರ ಸಂತಾಪ ವ್ಯಕ್ತಪಡಿಸಿದರು. ಅವರ ಅಗಲಿಕೆಯಿಂದ ಉಂಟಾಗಿರುವ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಬಸವಾದಿ ಪ್ರಮಥರು ಅವರ ಕುಟುಂಬ ವರ್ಗದವರಿಗೆ ನೀಡಲಿ ಎಂದಿದ್ದಾರೆ. ನಂತರ ಒಂದು ನಿಮಿಷ ಮೌನಾಚರಿಸಿ, ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ನಿಪ್ಪಾಣಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಮಾಜಿ ಶಾಸಕ ಹೆಚ್. ಎಸ್.ಶಿವಶಂರ್, ಎಸ್.ಜೆ.ಎ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯ ನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ ಮತ್ತಿತರರಿದ್ದರು.

## ಘಟಕಗಳನ್ನು ನಿರ್ವಹಿಸಿದ ನೇತಾರ

**(1ನೇ ಪುಟದಿಂದ)** ಅಮೆರಿಕ ವ್ಯೂಹಾತ್ಮಕ ಸಂಬಂಧದಲ್ಲಿ ಮಹತ್ವದ ತಿರುವಿಗೆ ಕಾರಣ ವಾಗಿತ್ತು. ಆಗ ರಕ್ಷಣಾ ಸಚಿವರಾಗಿದ್ದ ಮುಖರ್ಜಿ, ಭಾರತ – ಅಮೆರಿಕಗಳ ರಕ್ಷಣಾ ಸಂಬಂಧದ ನೂತನ ಚೌಕಟ್ಟಿನ ಒಪ್ಪಂದಕ್ಕೆ ಸಹಿ ಹಾಕಿದ್ದರು.

ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ 2004ರಿಂದ 2012ರ ನಡುವೆ ತೆಗೆದುಕೊಂಡ ಮಾಹಿತಿ ಹಕ್ಕು, ಆಹಾರ ಸುರಕ್ಷತೆ, ಆಧಾರ್ ಹಾಗೂ ಮೆಟ್ರೋ ರೈಲು ಯೋಜನೆ ಸೇರಿದಂತೆ ಹಲವು ವಿಷಯಗಳಲ್ಲಿ ಮುಖರ್ಜಿ ಮಹತ್ವದ ಪಾತ್ರ ವಹಿಸಿದ್ದರು.

ಹೆಚ್.ಡಿ. ದೇವೇಗೌಡ ಹಾಗೂ ಐ.ಕೆ. ಗುಜ್ರಾಲ್ ನೇತೃತ್ವದ ಕಾಂಗ್ರೆಸ್ಸೇತರ ಸರ್ಕಾರಗಳು ರೂಪುಗೊಳ್ಳುವಲ್ಲಿ ಹಾಗೂ ಕಾಂಗ್ರೆಸ್ ಹೊರಗಿನಿಂದ ಬೆಂಬಲ ನೀಡುವಲ್ಲಿ ಮುಖರ್ಜಿ ಸಕ್ರಿಯ ಪಾತ್ರ ವಹಿಸಿದ್ದರು.

ರಾಷ್ಟ್ರಪತಿಯಾದ ಸಂದರ್ಭದಲ್ಲಿ ಕ್ಷಮಾದಾನದ ಅರ್ಜಿಗಳ ಬಗ್ಗೆ ಅವರು ಕಠಿಣ ನಿಲುವು ತಳೆದಿದ್ದರು. ತಮ್ಮ ಬಳಿ ಬಂದ 34 ಕ್ಷಮಾಯಾಚನೆಯ ಅರ್ಜಿಗಳ ಪೈಕಿ 30 ಅನ್ನು ಅವರು ತಿರಸ್ಕರಿಸಿದ್ದರು.

ರಾಷ್ಟ್ರಪತಿ ಭವನವನ್ನು ಸಾರ್ವಜನಿಕರ ಮತ್ತಷ್ಟು ಹತ್ತಿರಕ್ಕೆ ತಂದಿದ್ದ ಮುಖರ್ಜಿ, ಅಲ್ಲೊಂದು ವಸ್ತು ಸಂಗ್ರಹಾಲಯ ಸಹ ತೆರೆದಿದ್ದರು.


## ಪ್ರಣಬ್ ಮುಖರ್ಜಿ ಅಗಲಿಕೆಗೆ ಶ್ರೀ ರಂಭಾಪುರಿ ಜಗದ್ಗುರುಗಳ ಸಂತಾಪ

ರಂಭಾಪುರಿ ಪೀಠ, ಆ.31- ಆರ್ಥಿಕ ತಜ್ಞ, ಸಂಭಾವಿತ ರಾಜಕಾರಣಿ ಪ್ರಣಬ್ ಮುಖರ್ಜಿ ನಿಧನಕ್ಕೆ ಶ್ರೀ ರಂಭಾಪುರಿ ಜಗದ್ಗುರು ಡಾ. ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಶೋಕ ವ್ಯಕ್ತಪಡಿಸಿದ್ದಾರೆ.

## ಮಲೇಬೆನ್ನೂರು ಪುರಸಭೆ ಸಿಇಓ ವರ್ಗ

ಮಲೇಬೆನ್ನೂರು, ಆ.31- ಪುರಸಭೆಯ ಮುಖ್ಯಾಧಿಕಾರಿ ಧರಣೇಂದ್ರ ಕುಮಾರ್ ಅವರನ್ನು ವರ್ಗಾಯಿಸಿದ್ದು, ಸ್ಥಳ ತೋರಿಸಿಲ್ಲ. ಧರಣೇಂದ್ರ ಕುಮಾರ್ ಅವರ ಸ್ಥಾನಕ್ಕೆ ಚಿತ್ರದುರ್ಗ ನಗರಸಭೆಯ ಹಿರಿಯ ಆರೋಗ್ಯ ನಿರೀಕ್ಷಕರಾದ ಶ್ರೀಮತಿ ರುಕ್ಮಿಣಿ ಅವರು ನೇಮಕಗೊಂಡಿದ್ದಾರೆ.

## ನ್ಯಾಯಾಂಗದ ಅವಹೇಳನ: 1 ರೂ. ದಂಡ




**(1ನೇ ಪುಟದಿಂದ)** ವರ್ಷಗಳವರೆಗೆ ನಿರ್ಬಂಧ ಹೇರುವುದಾಗಿ ತಿಳಿಸಿದೆ.ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಡಿತಗೊಳಿಸಲಾಗದು. ಆದರೆ, ಇತರರ ಹಕ್ಕುಗಳನ್ನೂ ಸಹ ಗೌರವಿಸಬೇಕು ಎಂದು ಪೀಠ ತಿಳಿಸಿದೆ. ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೃಷ್ಣ ಮುರಾರಿ ಅವರು ಪೀಠದ ಇತರೆ ಸದಸ್ಯರಾಗಿದ್ದಾರೆ. ನ್ಯಾಯಾಲಯದ ತೀರ್ಪಿನ ಅನ್ವಯ ದಂಡ ಪಾವತಿಸುವುದಾಗಿ ಪ್ರಶಾಂತ್ ಭೂಷಣ್ ತಿಳಿಸಿದ್ದಾರೆ.

ದಸರಾ ಹಬ್ಬದ ಪ್ರಯುಕ್ತ ಮೆಕ್ಯಾನಿಕ್‌ಗಳಿಗೆ ಸುವರ್ಣಾವಕಾಶ

ಹೆಚ್.ಪಿ. ಬ್ರಾಂಡೆಡ್ ಕಂಪನಿಯ ಎಲ್ಲಾ ತರಹದ ಆಯಿಲ್ ಮತ್ತು ಗ್ರೀಸ್ ಡೀಲರ್ ಕಮೀಷನ್ ಹೊರತುಪಡಿಸಿ ಕಡಿಮೆ ದರದಲ್ಲಿ ಸಿಗುತ್ತದೆ. ತಕ್ಷಣ ಸಂಪರ್ಕಿಸಿ :

ಶಂಕರ ಲೀಲಾ ಪೆಟ್ರೋಲ್ ಬಂಕ್
ಆವರಗೆರೆ – ದಾವಣಗೆರೆ.
ಮೊ. 90190-94446
* Conditions appply

## ನಗರದಲ್ಲಿ ಮೊಹರಂ 'ಯಾದೇ ಹುಸೇನ್' ಆಚರಣೆ

**ಬಿ. ಸಿಕಂದರ್**

ದಾವಣಗೆರೆ, ಆ.31- ಚಂದ್ರದರ್ಶನದಿಂದ ಪ್ರಾರಂಭವಾಗುವ ಮುಸ್ಲಿಂ ಬಾಂಧವರ ಹೊಸ ವರ್ಷದ ಸಂಕೇತವಾಗಿರುವ ಮೊಹರಂ 'ಯಾದೇ ಹುಸೇನ್' ಹಬ್ಬವನ್ನು ನಗರಾದ್ಯಂತ ಮುಸ್ಲಿಂ ಬಾಂಧವರು ಶ್ರದ್ಧಾಭಕ್ತಿಯಿಂದ ಸರಳವಾಗಿ ಆಚರಿಸಿದರು.

ಸಂಪ್ರದಾಯದಂತೆ ಚಂದ್ರದರ್ಶನವಾದ ಮೇಲೆ ನಗರದ ವಿವಿಧ ಪ್ರದೇಶಗಳಲ್ಲಿ ಆಲೇ ದೇವರು (ಪಂಜಾಗಳು 10 ದಿನಗಳ ಕಾಲ ಕೂರಿಸಿ ಸಾರ್ವಜನಿಕರಿಗೆ ದರ್ಶನ, ಹರಕೆ ಅರ್ಪಿಸಿದರು. ಭಾವೈಕತೆಯ ಪ್ರತಿಬಿಂಬವಾಗಿರುವ ಈ ಹಬ್ಬದ ಆಚರಣೆಯಲ್ಲಿ ಹಿಂದೂ, ಮುಸ್ಲಿಂ ಬಾಂಧವರು ಒಗ್ಗೂಡಿ ಸಾಲು ಸಾಲಾಗಿ ನಿಂತು ಅಲಾಯಿ ದೇವರ ದರ್ಶನ ಪಡೆದು ಓದುಕೆ (ಫಾತೇಹಾ) ಮಾಡಿಸಿಕೊಳ್ಳುವ ಮೂಲಕ ತಮ್ಮ ಭಕ್ತಿಯನ್ನು ಅರ್ಪಿಸಿದರು.

**ಹಬ್ಬ ಆಚರಣೆಯಲ್ಲಿ ಗೊಂದಲ :** ಚಂದ್ರದರ್ಶನದ ಹತ್ತನೇ ದಿನಕ್ಕೆ 'ಯೌಮೇ ಅಶುರಾ' ಪಡಿಸಲಾಗುವುದು. ಅದರಂತೆ ನಗರದ ಎಲ್ಲ ಮುಸೀದಿಗಳಲ್ಲಿ ಭಾನುವಾರ ದಂದು 10 ನೇ ದಿನ ಆಚರಿಸಿ, ವಿಶೇಷ ಪ್ರಾರ್ಥನೆ ಫಾತೇಹಾ ಸಿಹಿ, ಖಿಚಡಾ ವಿತರಿಸಲಾಯಿತು. ಆದರೆ ನಗರದ ವಿವಿಧ ಪ್ರದೇಶಗಳಲ್ಲಿ ಪಂಜಾಗಳು ಕೂರಿಸಿದ ಮೌಲಾ ಅಲಿ ಮಕಾನ್ ಸಮಿತಿಯವರು ಸೋಮವಾರದಂದು ಹತ್ತನೇ ದಿನ ಆಚರಿಸಿ ಮೊಹರಂ ಹಬ್ಬಕ್ಕೆ ತೆರೆ ಎಳೆದರು. ಹೀಗಾಗಿ ನಗರ ಹಾಗೂ ಗ್ರಾಮಾಂತರ ಪ್ರದೇಶದ ಜನರಿಗೆ ಹಬ್ಬ ಆಚರಣೆಯ ನಿಗದಿತ ದಿನ ಸ್ವಲ್ಪ ಗೊಂದಲ ಸೃಷ್ಟಿಸಿತು.

ಹಜರತ್ ಸೈಯದ್ ಖಿಡಕ್ ಷಾವಲಿ ದರ್ಗಾದಲ್ಲಿ ಕೂರಿಸಿದ್ದ ಪಂಜಾಗಳು ಇಂದು ಸಾಯಂಕಾಲ ಹೊಂಡದ ವೃತ್ತದಲ್ಲಿರುವ ಹಜರತ್ ಸೈಯದ್ ರತನ್ ಷಾವಲಿ ದರ್ಗಾಕ್ಕೆ ತಲುಪಿ ಅಂತಿಮ ದಿನದ ಶ್ಲೋಕಗಳನ್ನು ಓದುತ್ತಾ ತಮ್ಮ ಸ್ಥಳಕ್ಕೆ ಹಿಂದಿರುಗಿದವು.

ಕೊರೊನಾ ಸೋಂಕಿನ ಭೀತಿಯಿಂದಾಗಿ ಜಿಲ್ಲಾಡಳಿತದ ಆದೇಶಕ್ಕೆ ಬದ್ಧರಾಗಿ ಸಾಮಾಜಿಕ ಅಂತರ ಕಾಪಾಡುವ ನಿಟ್ಟಿನಲ್ಲಿ ಆಚರಿಸಿದ ಈ ಬಾರಿ ಮೊಹರಂ ಹಬ್ಬದಲ್ಲಿ ಸಾರ್ವಜನಿಕ ತಖರೀರ್ (ಉಪನ್ಯಾಸ) ಕಾರ್ಯಕ್ರಮಗಳು ಪಂಜಾಗಳ ಮೆರವಣಿಗೆ ಇರಲಿಲ್ಲ. ಹೀಗಾಗಿ ಈ ವರ್ಷದ ಮೊಹರಂ ಹಬ್ಬವನ್ನು ಸರಳ ರೀತಿಯಿಂದ ಆಚರಿಸಲಾಯಿತು.


ಮಸೀದಿಗಳಲ್ಲಿ ಕಳೆದ 10 ದಿನಗಳಿಂದ ಮೊಹರಂ ಉಪನ್ಯಾಸ ನೀಡಲಾಯಿತು. ಸಿಹಿ ವಿತರಿಸಲಾಯಿತು. ನಗರದ ವಿವಿಧ ಬಡಾವಣೆಗಳಲ್ಲಿ ಸಂಘ-ಸಂಸ್ಥೆಯ ಷರಬತ್ ವಿತರಿಸಲಾಯಿತು.

ವಿನೋಬನಗರ, ಕೆ.ಟಿ.ಜೆ. ನಗರ, ಆಹಮ್ಮದ್ ನಗರ, ಬೇತೂರು ರಸ್ತೆ ಸೇರಿದಂತೆ ಅಖ್ತರ್ ರಜಾ ಸರ್ಕಲ್, ರಿಂಗ್ ರಸ್ತೆ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಆಲೇ ದೇವರನ್ನು ಕೂರಿಸಲಾಗಿತ್ತು.

## 255 ಪಾಸಿಟಿವ್ 371 ಬಿಡುಗಡೆ


**(1ನೇ ಪುಟದಿಂದ)** ಕಾಣಿಸಿಕೊಂಡಿದೆ. ದಾವಣಗೆರೆ ರಂಗನಾಥ ಬಡಾವಣೆಯ 79 ವರ್ಷದ ಮಹಿಳೆ, ಎಸ್.ಎಸ್. ಬಡಾವಣೆಯ 68 ವರ್ಷದ ಮಹಿಳೆ, ನಿಟುವಳ್ಳಿಯ 53 ವರ್ಷದ ಪುರುಷ, ಭಗತ್ ಸಿಂಗ್ ನಗರದ 74 ವರ್ಷದ ಪುರುಷ, ಹಳೇಕುಂದುವಾಡದ 69 ವರ್ಷದ ಮಹಿಳೆ ಹಾಗೂ ಲಕ್ಷ್ಮಿಸಾಗರದ 65 ವರ್ಷದ ಪುರುಷ ಸೋಂಕಿನಿಂದ ಮೃತಪಟ್ಟಿದ್ದಾರೆ.

ಶ್ರೀ ಅನ್ನಪೂರ್ಣೇಶ್ವರಿ ಹೋಟೆಲ್
KSRTC ಬಸ್‌ನಿಲ್ದಾಣ, ದಾವಣಗೆರೆ.
24x7 ಹಗಲು-ರಾತ್ರಿ ಸೇವೆ 24x7



ನಾಲ್ಕು ಸಾವಿರ ಚದುರಡಿಯ ವಿಶಾಲವಾದ ಜಾಗದಲ್ಲಿ ಸುಸಜ್ಜಿತವಾದ ಹೋಟೆಲ್‌ನಲ್ಲಿ ರಾತ್ರಿ ವೇಳೆ ರುಚಿಕರವಾದ ಬೆಣ್ಣೆದೋಸೆ ಸೇರಿದಂತೆ ವಿವಿಧ ಬಗೆಯ ದೋಸೆಗಳು ದೊರೆಯುತ್ತವೆ.

ಶುಚಿ-ರುಚಿಯಾದ ತಿಂಡಿಗಳು, ಊಟವನ್ನು ಸವಿಯಲು ಭೇಟಿ ನೀಡಿ.




## ಮಲೇಬೆನ್ನೂರು ಹೋಬಳಿಯಲ್ಲಿ 17 ಸೋಂಕು

ಮಲೇಬೆನ್ನೂರು, ಆ.31- ಹೋಬಳಿಯಲ್ಲಿ ಕಳೆದ 2 ದಿನಗಳಲ್ಲಿ 12 ಕೊರೊನಾ ಪಾಸಿಟಿವ್ ಪ್ರಕರಣಗಳು ದೃಢಪಟ್ಟಿವೆ.

ಭಾನುವಾರ ಮಲೇಬೆನ್ನೂರಿನ 2, ಕೆ.ಎನ್. ಹಳ್ಳಿ ಹಾಗೂ ನಂದಿಗುಡಿಯಲ್ಲಿ ತಲಾ ಒಬ್ಬರಿಗೆ ಮತ್ತು ಸೋಮವಾರ ಮಲೇಬೆನ್ನೂರಿನಲ್ಲಿ ನಾಲ್ವರಿಗೆ, ನಂದಿತಾವರೆ, ಕೆ.ಎನ್. ಹಳ್ಳಿಯಲ್ಲಿ ತಲಾ ಒಬ್ಬರಿಗೆ, ಹೊಳೆಸಿರಿಗೆರೆಯಲ್ಲಿ ಇಬ್ಬರಿಗೆ ಸೋಂಕು ತಗುಲಿದೆ.

**124 ಜನರಿಗೆ ಟೆಸ್ಟ್ :** ಸೋಮವಾರ ಧೂಳೆಹೊಳೆಯಲ್ಲಿ 60 ಜನರಿಗೆ ಮತ್ತು ನಂದೀಶ್ವರ ಕ್ಯಾಂಪ್‌ನಲ್ಲಿ 64 ಜನರಿಗೆ ಕೊರೊನಾ ರ್‍ಯಾಪಿಡ್ ಟೆಸ್ಟ್ ಮಾಡಲಾಗಿದ್ದು, ಧೂಳೆಹೊಳೆಯಲ್ಲಿ ಒಬ್ಬರಿಗೆ ಹಾಗೂ ನಂದೀಶ್ವರ ಕ್ಯಾಂಪ್‌ನಲ್ಲಿ ನಾಲ್ವರಿಗೆ ಸೋಂಕು ಕಂಡುಬಂದಿದೆ ಎಂದು ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ ತಿಳಿಸಿದ್ದಾರೆ.

# ಪಿಎಂಜಿಎಸ್‌ವೈ ಯೋಜನೆಯಡಿ ಜಿಲ್ಲೆಗೆ 140 ಕೋ. ರೂ.

## ಕೊಮಾರನಹಳ್ಳಿಯಲ್ಲಿ ಕಾಮಗಾರಿಯ ಗುದ್ದಲಿ ಪೂಜಾ ಕಾರ್ಯಕ್ರಮದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ

ಮಲೇಬೆನ್ನೂರು, ಆ. 31-ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ದಾವಣಗೆರೆ ಜಿಲ್ಲೆಯಲ್ಲಿ 166 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸಲು 140 ಕೋಟಿ ರೂ. ಮಂಜೂರಾಗಿದ್ದು, ಈಗಾಗಲೇ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಮಗಾರಿಗೆ ಚಾಲನೆ ನೀಡಿದ್ದೇನೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಕೊಮಾರನಹಳ್ಳಿಯಲ್ಲಿ ತಿಮ್ಲಾಪುರ ಗಡಿಭಾಗದಿಂದ ಕೊಪ್ಪ-ಕೊಮಾರನಹಳ್ಳಿ-ವಡೆಯರ ಬಸಾಪುರ-ಕೊಕ್ಕನೂರು ಮಟ್ಟಿ ಕ್ಯಾಂಪ್ ವಯಾ ಗೋವಿನಹಾಳ್ ಸಮೀಪದ ಜಿಲ್ಲಾ ಮುಖ್ಯ ರಸ್ತೆಗೆ ಸೇರುವ ರಸ್ತೆ ಕಾಮಗಾರಿಗೆ ಇಂದು ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಹರಿಹರ ತಾಲ್ಲೂಕಿನ ಹನಗವಾಡಿ ಸಮೀಪದ ರಾಷ್ಟ್ರೀಯ ಹೆದ್ದಾರಿಯಿಂದ ಹನಗವಾಡಿ-ಬೆಳ್ಳೂಡಿ-ಬನ್ನಿಕೋಡು-ಸತ್ಯನಾರಾಯಣ ಕ್ಯಾಂಪ್-ಹಳೇಕುಂದುವಾಡ ಸಂಪರ್ಕಿಸುವ ರಸ್ತೆಯನ್ನು 10.76 ಕೋಟಿ ರೂ. ವೆಚ್ಚದಲ್ಲಿ ಮತ್ತು ತಿಮ್ಲಾಪುರದಿಂದ ಕೊಕ್ಕನೂರು ಮಟ್ಟಿ ಕ್ಯಾಂಪ್ ವಯಾ ಗೋವಿನಹಾಳ್ ಸಮೀಪದ ಜಿಲ್ಲಾ ಮುಖ್ಯರಸ್ತೆಯನ್ನು 9.70 ಕೋಟಿ ರೂ. ವೆಚ್ಚದಲ್ಲಿ



ಅಭಿವೃದ್ಧಿಪಡಿಸಲಾಗುವುದು.

ರಸ್ತೆ ಅಭಿವೃದ್ಧಿ ಪಡಿಸುವ ವೇಳೆ ರೈತರು ಸಹಕಾರ ನೀಡಿ. ರಸ್ತೆ ಒತ್ತುವರಿಯಾಗಿದ್ದರೆ ಬಿಟ್ಟುಕೊಡಬೇಕೆಂದು ಮನವಿ ಮಾಡಿದ ಸಂಸದ ಸಿದ್ದೇಶ್ವರ ಅವರು, ಈ ರಸ್ತೆ ಅಭಿವೃದ್ಧಿಗೊಂಡ ನಂತರ 5 ವರ್ಷ ನಿರ್ವಹಣೆ ಇರುತ್ತದೆ. ಹಾಗಂತ ರಸ್ತೆಯ ಮೇಲೆ ಕೇಜ್‌ವ್ಹೀಲ್ ಹಾಕಿಕೊಂಡು ಟ್ರ್ಯಾಕ್ಟರ್ ಓಡಿಸಬೇಡಿ ಎಂದರು.

ಬೆಳ್ಳೂಡಿಯಲ್ಲಿ ಗ್ರಾಮಸ್ಥರು ಸಿಸಿ ರಸ್ತೆ ಮಾಡಿಸಿಕೊಡಿ ಎಂದು ಒತ್ತಾಯಿಸಿದ್ದಾರೆ. ಆದರೆ ಗ್ರಾಮ ಸಡಕ್ ಯೋಜನೆಯಲ್ಲಿ ಸಿಸಿ ರಸ್ತೆಗೆ ಅವಕಾಶ ಇರುವುದಿಲ್ಲ. ಜನರು ಇದನ್ನು ಅರ್ಥಮಾಡಿಕೊಳ್ಳಬೇಕೆಂದರು.

ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್ ಮತ್ತು ನಾನು ಸೇರಿಕೊಂಡು ಹರಿಹರ ತಾಲ್ಲೂಕಿನಲ್ಲಿ ಆಗಬೇಕಾದ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ತರಲು ಶ್ರಮಿಸುತ್ತೇವೆ ಎಂದ ಸಿದ್ದೇಶ್ವರ ತಿಳಿಸಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ಭೈರನಪಾದ ಏತ ನೀರಾವರಿ ಯೋಜನೆ ಮತ್ತು ಕೊಮಾರನಹಳ್ಳಿ ಕೆರೆ ಅಭಿವೃದ್ಧಿಪಡಿಸಿ, ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆಗೆ ಹಾಗೂ ಈ ಹಿಂದೆ ಮಂಜೂರಾಗಿದ್ದ ರಸ್ತೆ ಕಾಮಗಾರಿಗಳಿಗೂ ಸರ್ಕಾರದಿಂದ ಅನುದಾನ ಕೊಡಿಸಿ ಎಂದು ಸಂಸದ ಸಿದ್ದೇಶ್ವರ ಅವರನ್ನು ಕೇಳಿಕೊಂಡರು.

ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷೆ ಸಾಕಮ್ಮ ಗಂಗಾಧರ್ ನಾಯ್ಕ, ತಾ.ಪಂ. ಅಧ್ಯಕ್ಷೆ ಶ್ರೀದೇವಿ ಮಂಜಪ್ಪ, ಎಪಿಎಂಸಿ ಸದಸ್ಯ ಜಿ. ಮಂಜುನಾಥ್ ಪಟೇಲ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಮುಖಂಡರಾದ ಯಕ್ಕನಹಳ್ಳಿ ಜಗದೀಶ್, ಐರಣಿ ಮಹೇಶ್ವರಪ್ಪ, ಅಣ್ಣಪ್ಪ, ಸುನೀಲ್, ಎಸ್.ಎಂ. ಮಂಜುನಾಥ್, ರಾಜಪ್ಪ, ಬಸವರಾಜ್, ಆದಾಪುರ ವೀರೇಶ್, ಪಿಎಂಜಿಎಸ್‌ವೈ ಕಾರ್ಯಪಾಲಕ ಅಭಿಯಂತರ ಕುಮಾರಸ್ವಾಮಿ, ಎಇಇ ಚಂದ್ರಮೌಳಿ, ಎಇ ಬಾಳಪ್ಪ, ಗುತ್ತಿಗೆದಾರ ಟಿ. ಶೇಖರಪ್ಪ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

# 12ನೇ ಶತಮಾನದ ಶರಣ ಕ್ರಾಂತಿ ಅತ್ಯದ್ಭುತ ಪವಾಡ

## 'ಮತ್ತೆ ಕಲ್ಯಾಣ' ಸಮಾರೋಪ ಸಮಾರಂಭದಲ್ಲಿ ಡಾ. ಚಂದ್ರಶೇಖರ ಕಂಬಾರ

ಸಾಣೇಹಳ್ಳಿ,ಆ.31-ಭಾರತದಯಾವುದೇ ಭಾಷೆಯಲ್ಲಿ ನಡೆಯಲಾರದೇ ಇರುವಂತಹ ಅತ್ಯದ್ಭುತ ಪವಾಡ 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದದ್ದು ಶರಣ ಚಳುವಳಿಯಿಂದ ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟರು.

ಸಾಣೇಹಳ್ಳಿಯ ಶ್ರೀಮಠದ ವತಿಯಿಂದ ಹಮ್ಮಿಕೊಂಡಿದ್ದ 'ಮತ್ತೆ ಕಲ್ಯಾಣ' ಉಪನ್ಯಾಸ ಮಾಲಿಕೆ ಕಾರ್ಯಕ್ರಮದ ಮುಕ್ತಾಯ ಸಮಾರಂಭದಲ್ಲಿ ಅವರು ಸಮಾರೋಪ ನುಡಿಗಳನ್ನಾಡಿದರು.

12ನೇ ಶತಮಾನದ ಕ್ರಾಂತಿ ಅದ್ಭುತ ಪವಾಡ. ಏಕೆಂದರೆ, ದೇಶೀ ಭಾಷೆಗಳಿಗೆ ಶಕ್ತಿ ಬಂತು. ಸಮಾಜದ ಎಲ್ಲ ಸ್ತರಗಳ, ಎಲ್ಲ ಕುಲ, ಜಾತಿ, ಕಸುಬು, ಗಂಡು, ಹೆಣ್ಣು ಎಲ್ಲರೂ ಸೇರಿಕೊಂಡು ಭೇದ ಭಾವವಿಲ್ಲದೆ ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸಲು ಸ್ವಾತಂತ್ರ್ಯ ಸಿಕ್ಕಿತು. ಬಸವಣ್ಣನವರ ನೇತೃತ್ವದಲ್ಲಿ ಎಲ್ಲ



ಶರಣರು ಕೂಡಿಕೊಂಡು ಕ್ರಾಂತಿ ಮಾಡಿದರು. ಅಲ್ಲಿಯವರೆಗೂ ದೇವರ ಜೊತೆ ಸಂಸ್ಕೃತದಲ್ಲಿ ಮಾತ್ರ ಮಾತನಾಡಬೇಕಿತ್ತು. ಆದರೆ ಶರಣರ ಕ್ರಾಂತಿಯಿಂದ ನಮ್ಮ ದೇವರ ಜೊತೆ ನಾವೇ ಮಾತನಾಡುವಂತಾಯಿತು ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಮಾತನಾಡಿ, ವಚನಕಾರರ ಕಾಲಕ್ಕೆ ಪರಿಸರ ಬೇರೆ, ಮಾನವ ಬೇರೆ ಎನ್ನುವ ಭಿನ್ನತೆ ಇರಲಿಲ್ಲ. ಕೈಗಾರಿಕಾ ಕ್ರಾಂತಿಯ ನಂತರ ಪರಿಸರ ಪ್ರಜ್ಞೆ ಹೆಚ್ಚಾಗಿದೆ. ಕೈಗಾರಿಕೆಗಳ ಹಿಂದೆಯೇ ಹಸಿರು ಕ್ರಾಂತಿ ಸಹ ಆರಂಭವಾಗಿ, ಅಣೆಕಟ್ಟುಗಳ ನಿರ್ಮಾಣದ ಯೋಜನೆಗಳಿಗಾಗಿ ಫಲವತ್ತಾದ ಭೂಪ್ರದೇಶ, ಕಾಡು, ಗುಡ್ಡ-ಬೆಟ್ಟಗಳ ನಾಶ ಅನಿವಾರ್ಯವಾಯ್ತು. ಆಧುನಿಕತೆ ಕಾಲಿಟ್ಟಂತೆ ಪರಿಸರವೇ ಬೇರೆ ಮಾನವನೇ ಬೇರೆ ಆಗಿರುವುದೇ, ತನ್ನ ಸ್ವಾರ್ಥಕ್ಕೆ ಎನ್ನುವ ದುರ್ಬುದ್ಧಿ ಬೆಳೆಯುತ್ತಾ ಹೋಗಿ ಪರಿಸರ ವಿನಾಶದ ಅಂಚು ತಲುಪುತ್ತಾ ಅನೇಕ ದುರಂತಗಳಿಗೆ ಕಾರಣವಾಗಲಾರಂಭಿಸಿತು ಎಂದು ಹೇಳಿದರು.

'ವಚನಗಳಲ್ಲಿ ಪರಿಸರ ಪ್ರೇಮ' ವಿಷಯ ಕುರಿತು ಮಾತನಾಡಿದ ಸಮಾಜ ಕಲ್ಯಾಣ ಇಲಾಖೆ ಮುಖ್ಯಲೆಕ್ಕಾಧಿಕಾರಿ ಡಿ.ಪಿ. ಪ್ರಕಾಶ್, ಬಸವಾದಿ ಶಿವಶರಣರ ವಚನಗಳಲ್ಲಿ ಪರಿಸರದ ನಡುವಿನ ಸಂಬಂಧ ಹಾಸುಹೊಕ್ಕಾಗಿದೆ. ಅಕ್ಕಮಹಾದೇವಿ ತನ್ನ ವಚನಗಳಲ್ಲಿ ಹೋಲಿಕೆಗೆ ಆರಿಸಿಕೊಂಡಿರುವುದು ಪರಿಸರವನ್ನು. ಶರಣರಿಗೆ ಪರಿಸರಕ್ಕೆ ಸಂಬಂಧಪಟ್ಟಂತೆ ಸ್ಪಷ್ಟವಾದ ಅಭಿಮತವಿದೆ ಎಂದರಲ್ಲದೇ, ಶರಣರ ವಚನಗಳನ್ನು ಉದಾಹರಿಸುವ ಮೂಲಕ ವಿಷಯ ಮಂಡನೆ ಮಾಡಿದರು.

ಶಿವಸಂಚಾರ ಕಲಾವಿದರಾದ ಕೆ. ಜ್ಯೋತಿ, ಕೆ. ದಾಕ್ಷಾಯಣಿ, ಸಾಹಿತ್ಯ ಮತ್ತು ಹೆಚ್.ಎಸ್. ನಾಗರಾಜ್ ತಬಲಾ ಸಾಥಿ ಶರಣ್ ಕುಮಾರ್ ವಚನ ಗೀತೆಗಳನ್ನು ಹಾಡಿದರು. ಅದಿತಿ ಮತ್ತು ಶಿವಕುಮಾರ ಸ್ವಾಮೀಜಿ ಪ್ರಾಥಮಿಕ ಶಾಲೆ ಮಕ್ಕಳು ವಚನ ನೃತ್ಯರೂಪಕ ನೀಡಿದರು. ಶಿವಸಂಚಾರದ ಬಿ. ರಾಜು ಲಕ್ಕಮುತ್ತೇನಹಳ್ಳಿ ಸ್ವಾಗತಿಸಿದರು.

ದಾವಣಗೆರೆ ಬಸವ ಬಳಗ, ಕೊಟ್ಟೂರು ತಾಲ್ಲೂಕಿನ ಜಿ.ಇ. ನಿರ್ಮಲ ಜಿ. ಈಶ್ವರಪ್ಪ ಕುಟುಂಬ, ಬ್ಯಾಡಗಿ ತಾಲ್ಲೂಕು ಆರ್.ಎಸ್. ಪಾಟೀಲ, ಹೊಸಪೇಟೆ ವೈದ್ಯ ಡಾ. ಮಹಾಬಲೇಶ್, ಸಾಣೇಹಳ್ಳಿ ತುಂಗಮ್ಮ ಮತ್ತು ಶ್ರೀಧರನ್ ಕುಟುಂಬದವರು ಕಾರ್ಯಕ್ರಮದ ದಾಸೋಹಿಗಳಾಗಿದ್ದರು.



### 'ಓಣಂ' ಆಚರಣೆ

ಕೇರಳದ ಸಾಂಪ್ರದಾಯಿಕ ಹಬ್ಬವಾದ ಓಣಂ ಅನ್ನು ನಗರದ ಸೌತ್ ಇಂಡಿಯನ್ ಬ್ಯಾಂಕ್‌ನಲ್ಲಿ ಆಚರಿಸಲಾಯಿತು.

## ಕೊರೊನಾದಿಂದ ಡಿಕೆಶಿ ಗುಣಮುಖರಾಗಿ ಮನೆಗೆ



ಬೆಂಗಳೂರು , ಆ.31- ಕೊರೊನಾ ಸೋಂಕಿನಿಂದ ಗುಣಮುಖರಾದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ. ಆ. 24ರಂದು ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಕೊರೊನಾ ಪರೀಕ್ಷೆಗೆ ಒಳಪಡಿಸಿದಾಗ ಅವರಿಗೆ ಸೋಂಕು ತಗುಲಿರುವುದು ಖಚಿತ ಪಟ್ಟಿತ್ತು. ನಗರದ ಸುಗುಣ ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ತಂಡ ಅವರನ್ನು ಇಂದು ಪರಿಶೀಲಿಸಿದ ನಂತರ ಸೋಂಕಿನಿಂದ ಗುಣಮುಖರಾಗಿರುವುದನ್ನು ಖಚಿತಪಡಿಸಿಕೊಂಡು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ.

## ಜಿಎಸ್‌ಟಿ ಸಾಲಕ್ಕೆ ಕೇರಳದ ನಕಾರ

ನವದೆಹಲಿ, ಆ. 31 – ಜಿ.ಎಸ್.ಟಿ. ಕೊರತೆಯನ್ನು ನೀಗಿಸಲು ರಾಜ್ಯಗಳು ಸಾಲ ಮಾಡಬೇಕೆಂಬ ಕೇಂದ್ರ ಸರ್ಕಾರದ ಪ್ರಸ್ತಾಪವನ್ನು ಸಂಪೂರ್ಣವಾಗಿ ತಳ್ಳಿ ಹಾಕುವುದಾಗಿ ಕೇರಳ ಹಣಕಾಸು ಸಚಿವ ಥಾಮಸ್ ಐಸಾಕ್ ತಿಳಿಸಿದ್ದಾರೆ.

ಪಂಜಾಬ್, ಕೇರಳ, ದೆಹಲಿ ಹಾಗೂ ಪಶ್ಚಿಮ ಬಂಗಾಳ ಮುಂತಾದ ಪ್ರತಿಪಕ್ಷಗಳ ಆಡಳಿತದ ಸರ್ಕಾರಗಳು ಜಿ.ಎಸ್.ಟಿ. ಕೊರತೆಯಾದ 2.35 ಲಕ್ಷ ಕೋಟಿ ರೂ.ಗಳನ್ನು ಭರಿಸಲು ಸಾಲ ಮಾಡಬೇಕೆಂಬ ಕೇಂದ್ರ ಸರ್ಕಾರದ ಪ್ರಸ್ತಾಪವನ್ನು ವಿರೋಧಿಸುತ್ತಿವೆ.

ಜಿ.ಎಸ್.ಟಿ. ಕಾರಣದಿಂದಾಗಿ 97 ಸಾವಿರ ಕೋಟಿ ರೂ.ಗಳ ಕೊರತೆಯಾಗಿದೆ ಹಾಗೂ ಕೊರೊನಾ ಕಾರಣದಿಂದಾಗಿ 1.38 ಲಕ್ಷ ಕೋಟಿ ರೂ.ಗಳ ಕೊರತೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿತ್ತು.

ರಾಜ್ಯಗಳು 97 ಸಾವಿರ ಕೋಟಿ ರೂ. ಸಾಲ ಪಡೆಯಬಹುದು ಇಲ್ಲವೇ ಪೂರ್ಣ 2.35 ಲಕ್ಷ ಕೋಟಿ ರೂ.ಗಳ ಸಾಲ ಪಡೆಯಬಹುದು ಎಂದು ಕೇಂದ್ರ ಸರ್ಕಾರ ಪ್ರಸ್ತಾಪಿಸಿತ್ತು. ಆತ್ಮನಿರ್ಭರವಾಗಿರುವ ಯಾವುದೇ ರಾಜ್ಯ ಕೇಂದ್ರ ಸರ್ಕಾರದ ಪ್ರಸ್ತಾಪವನ್ನು ಒಪ್ಪಿಕೊಳ್ಳುವುದಿಲ್ಲ. ರಾಜ್ಯಗಳ ಹಕ್ಕುಗಳನ್ನು ಬಲಿ ಕೊಡುವುದಿಲ್ಲ. ಜಿ.ಎಸ್.ಟಿ. ಪರಿಹಾರ ನಮ್ಮ ಸಂವಿಧಾನಿಕ ಹಕ್ಕು ಎಂದು ಐಸಾಕ್ ಹೇಳಿದ್ದಾರೆ.

## ಆಗಸ್ಟ್‌ನಲ್ಲಿ ವಾಡಿಕೆಗಿಂತ ಶೇ.27ರಷ್ಟು ಹೆಚ್ಚು ಮಳೆ


ನವದೆಹಲಿ, ಆ. 31 – ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತ ಶೇ.27ರಷ್ಟು ಹೆಚ್ಚು ಮಳೆ ಸುರಿದಿದೆ. ಇದು ಕಳೆದ 120 ವರ್ಷಗಳಲ್ಲಿ ಆಗಸ್ಟ್ ತಿಂಗಳಲ್ಲಿ ಸುರಿದ ನಾಲ್ಕನೇ ಅತಿ ಹೆಚ್ಚು ಮಳೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಜೂನ್ 1ರಿಂದ ಆಗಸ್ಟ್ 31ರ ನಡುವೆ ವಾಡಿಕೆಗಿಂತ ಶೇ.10ರಷ್ಟು ಹೆಚ್ಚಿನ ಮಳೆ ಬಂದಿದೆ ಎಂದು ಇಲಾಖೆ ಹೇಳಿದೆ. ಕಳೆದ 44 ವರ್ಷಗಳಲ್ಲಿ ಆಗಸ್ಟ್ ತಿಂಗಳ ಮಳೆ ಎಂದೂ ಈ ಪ್ರಮಾಣದಷ್ಟಿರಲಿಲ್ಲ ಎಂದು ಹವಾಮಾನ ಇಲಾಖೆಯ ಮುನ್ಸೂಚನಾ ಕೇಂದ್ರದ ವಿಜ್ಞಾನಿ ಆರ್.ಕೆ. ಜೇನಮಣಿ ಹೇಳಿದ್ದಾರೆ.




### ದರ್ಶನ್‌ಗೆ ಎಸ್ಸೆಸ್ಸೆಂ ಸನ್ಮಾನ

ಸೋಮವಾರ ದಾವಣಗೆರೆಗೆ ಆಗಮಿಸಿದ್ದ ನಟ ದರ್ಶನ್ ಮತ್ತು ಚಿಕ್ಕಣ್ಣ ಅವರುಗಳು ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಸನ್ಮಾನಿಸಿ, ಗೌರವಿಸಿದರು.


ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 30.08.2020ರಂದು ಭಾನುವಾರ ನಿಧನರಾದ ನಮ್ಮೆಲ್ಲರ ಆತ್ಮೀಯರೂ ಆದ, ನಮ್ಮ ಸಂಘದ ಮಾಜಿ ಸಂಸ್ಥಾಪಕ ಖಜಾಂಚಿಗಳಾಗಿದ್ದ

ಶ್ರೀ ಟಿ.ಎಸ್.ಮೊಹಮದ್ ಖಾಸಿಂ ಸಾಬ್

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸರ್ವ ಸದಸ್ಯರು
ದಾವಣಗೆರೆ ಸ್ಟೀಲ್ ಫ್ಯಾಬ್ರಿಕೇಟರ್ಸ್ ಅಸೋಸಿಯೇಷನ್ (ರಿ.)
ಕರೂರು ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.


## ಇಂದಿನಿಂದ 30 ರವರೆಗೆ ಹೊಸ ಮಾರ್ಗಸೂಚಿ ಪ್ರಕಟ

ದಾವಣಗೆರೆ, ಆ.31- ಕಂಟೈನ್ಮೆಂಟ್ ವಲಯದಲ್ಲಿ ಲಾಕ್‌ಡೌನ್ ಅವಧಿಯನ್ನು ನಾಳೆ ದಿನಾಂಕ 1 ರಿಂದ 30ರವರೆಗೆ ವಿಸ್ತರಿಸಿದ್ದು, ಕಂಟೈನ್ಮೆಂಟ್ ವಲಯಗಳ ಹೊರಗಿನ ಪ್ರದೇಶಗಳಲ್ಲಿ ಇನ್ನು ಹೆಚ್ಚಿನ ಕಾರ್ಯ ಚಟುವಟಿಕೆಗಳನ್ನು ಪುನರಾರಂಭಿಸಲು ಹೊಸ ಮಾರ್ಗ ಸೂಚಿಯನ್ನು ರಾಜ್ಯ ಸರ್ಕಾರದ ಆದೇಶದನ್ವಯ ಹೊರಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ. ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿ ಕೋರಿದ್ದಾರೆ.

## ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ಶ್ರೀರಾಮ ಬಡಾವಣೆ, ಡಿ.ಸಿ.ಎಂ. ಟೌನ್‌ಶಿಪ್, ಶಕ್ತಿನಗರ, ಅಂಬಿಕಾ ನಗರ, ಕೊಟ್ಟೂರೇಶ್ವರ ಬಡಾವಣೆ, ಜಯನಗರ, ಶೇಖರಪ್ಪ ಗೋಡೌನ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

| ಭದ್ರಾ ಜಲಾಶಯ | ಇಂದಿನ ಮಟ್ಟ : 182 ಅಡಿ 10 ಇಂಚು | ಒಳ ಹರಿವು : 2715 ಕ್ಯೂಸೆಕ್ಸ್ |
|---|---|---|
| | | ಹೊರ ಹರಿವು : 3294 ಕ್ಯೂಸೆಕ್ಸ್ |
| | | ಹಿಂದಿನ ವರ್ಷದ್ದು : 185.8 ಅಡಿ |




ಹೃತ್ಪೂರ್ವಕ ಕೃತಜ್ಞತೆಗಳು

ನನ್ನನ್ನು ಪಿ.ಜೆ. ಬಡಾವಣೆಯ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಿದ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ, ನನ್ನ ನೆಚ್ಚಿನ ಜನಪ್ರಿಯ ಶಾಸಕರೂ ಆಗಿರುವ

ಶ್ರೀ ಎಸ್.ಎ. ರವೀಂದ್ರನಾಥ್

ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಬಿಜೆಪಿಯ ಎಲ್ಲಾ ಮುಖಂಡರುಗಳಿಗೂ, ಪ್ರತ್ಯಕ್ಷ- ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.



ಎಸ್. ಪರಮೇಶ್ವರಪ್ಪ ಬಣಕಾರ
ಸದಸ್ಯರು, ಅಭಿವೃದ್ಧಿ ಸಮಿತಿ,
ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು,
ದಾವಣಗೆರೆ. ಮೊ : 99726 75765



Shri Dharmasthala Manjunatheshwara Educational Society (R), Ujire

SDM Institute of Technology (SDMIT)
UJIRE (DK) - 574 240

Electronics & Communication
Electrical & Electronics Engg.
Computer Science
Information Science
Mechanical Engineering
Civil Engineering

B.E. COURSES
ADMISSIONS OPEN

CET CODE: E152
COMEDK: E118

Affiliated to Visvesvaraya Technological University, Belagavi | Recognised by DTE, Govt. of Karnataka | Approved by AICTE, New Delhi




Texas Instruments Innovation Centre, Bosch Rexroth Centre of Excellence, Selco Incubation Centre, NAIN K-Tech Innovation Hub as student startup venture assistance

Nodal Centre for IIRS-ISRO Outreach Programme, VTU Nodal Centre for Free & Open Source Software, WIPRO Mission 10 x Technology Learning Centre

Excellent placement support and company specific training. MoU with Industry trainers for Internship

VTU recognised 6 Research Centres

Vast learning resources, NPTEL video lectures, VTU e-Consortium having access to 6,300+ libraries

Best residential amenities with SDM Hospital medi-care assistance

Ample opportunity to practise sports and cultural activities

Affordable college and hostel fee structure and Scholarship support

Young Innovative Minds Blossom at SDMIT Ujire

Vilas V of EEE secured 2nd Rank - 2019 ■ Prarthana Shanbhag, Computer Sc., 5th Rank - 2019 ■ Ashima Marriette Rodrigues, Computer Sc., 7th Rank - 2014 ■ Deekshitha Jeevandhar, Information Science, 2nd Rank - 2012

■ Won 1st prize in Anveshana Science & Engg. Fair: Agastya Foundation and Synopsis - 2019 ■ Won seed - money prize in India Innovation Challenge Design Contest for project 'Environmental Friendly Air Purifier' - 2017 ■ Seed - money prize for project 'Raitha Mitra': India Innovation Challenge Design Contest - 2016 ■ Aspiring Tech Talent Award for project 'Advanced E-bin' - 2016 ■ Won Clean India Hackathon Mangalore Zone - 2019 ■ Projects received funding from Karnataka State Council for Sc. Tech - 2019

944 895 1856 948 079 1055 08256 236961 office@sdmit.in www.sdmit.in


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte